# ಸಮನ್ವಯ ಶಿಕ್ಷಣ: ಸಮಸ್ಯೆಗಳು ಮತ್ತು ಸವಾಲುಗಳು

ಅನುರಾಧಾ ನಾಯ್ಡು




**ಸಾರಾಂಶ**

ಸಮನ್ವಯ ಶಿಕ್ಷಣವು ತುಲನಾತ್ಮಕವಾಗಿ ಹೊಸ ಪರಿಕಲ್ಪನೆಯಾಗಿದ್ದು, 'ಎಲ್ಲರಿಗೂ ಶಿಕ್ಷಣ' ಅಭಿಯಾನದ ನಂತರ 2000 ಇಸವಿಯಲ್ಲಿ ಅಂತರಾಷ್ಟ್ರೀಯ ಗಮನವನ್ನು ಸೆಳೆಯಿತು. ಭಾರತದಲ್ಲಿ, 86ನೇ ಸಂವಿಧಾನ ತಿದ್ದುಪಡಿಯು ಶಿಕ್ಷಣವನ್ನು ಪ್ರತಿಯೊಬ್ಬರಿಗೂ ಮೂಲಭೂತ ಹಕ್ಕಾಗಿ ಪರಿಗಣಿಸಿದ್ದು, ಇದು ವಿಶೇಷಚೇತನ ಮಗುವನ್ನು ಒಳಗೊಂಡಿದೆ. ತದನಂತರದ ಎರಡು ಶಾಸನಾತ್ಮಕ ಉಪಕ್ರಮಗಳ ಜಾರಿಯು (ಶಿಕ್ಷಣ ಹಕ್ಕು ಕಾಯಿದೆ ಮತ್ತು ಅಂಗವೈಕಲ್ಯ ಹೊಂದಿರುವ ವ್ಯಕ್ತಿಗಳ ಹಕ್ಕು ಕಾಯಿದೆ) ಕಲ್ಯಾಣ ಆಧರಿತ ವಿಧಾನದಿಂದ ಮಾನವ ಹಕ್ಕುಗಳಿಗೆ ಒತ್ತು ನೀಡುವತ್ತ ನೀತಿನಿಯಮಗಳು ಸ್ಥಿತ್ಯಂತರಗೊಂಡಿರುವುದನ್ನು ತೋರಿಸುತ್ತದೆ. ಆದರೂ, ದಾಖಲಾತಿಯ ಹೊರತಾಗಿಯೂ ವಿಶೇಷಚೇತನ ಮಕ್ಕಳು ತರಗತಿ ಕೋಣೆಯಲ್ಲಿ ಕಾಣಲು ಸಿಗುತ್ತಿಲ್ಲ ಎಂಬುದನ್ನು ವಿಶೇಷಚೇತನ ಹಕ್ಕು ಕಾರ್ಯಕರ್ತರು ಬೊಟ್ಟು ಮಾಡುತ್ತಾರೆ. ಈ ಪ್ರಬಂಧದಲ್ಲಿ ಪ್ರಸ್ತುತಪಡಿಸಲಾಗಿರುವ ಮೂರು ವಿಷಯ ಅಧ್ಯಯನಗಳು, ಕಾನೂನುಗಳು ಅಂಗವೈಕಲ್ಯವನ್ನು ಮಾನವ ವೈವಿಧ್ಯತೆಯ ಒಂದು ಅಂಶವೆಂದು ಪರಿಗಣಿಸಿದರೂ, ಮಕ್ಕಳು ಛಿದ್ರಗೊಂಡಿರುವ ವ್ಯವಸ್ಥೆಯ ಕೊರಕಲುಗಳಿಗೆ ಬಲಿಯಾಗುತ್ತಿದ್ದಾರೆ ಎಂಬುದನ್ನು ತೋರಿಸುತ್ತದೆ. ಗುಣಮಟ್ಟದ ಕಲಿಕೆಯನ್ನು ಪಡೆಯುವ ಉದ್ದೇಶದಿಂದ ಹಿಂದಿನ ಕೆಲವೊಂದು ನಿರ್ಣಾಯಕ ಅಂಶಗಳೆಂದರೆ, ವಿಭಿನ್ನ ಪಠ್ಯಕ್ರಮ, ಶಿಕ್ಷಣಶಾಸ್ತ್ರೀಯ ನಾವಿನ್ಯತೆ, ಪರೀಕ್ಷೆಯಲ್ಲಿ ಸುಧಾರಣೆ ಹಾಗೂ ಬಹು ಮುಖ್ಯವಾಗಿ ಶಿಕ್ಷಕರನ್ನು ಸಿದ್ಧಪಡಿಸುವುದು. ಸಾಮಾಜಿಕ ತಡೆಗಳನ್ನು ನಿವಾರಿಸಲು ಹಾಗೂ ಎಲ್ಲಾ ಮಕ್ಕಳ ಸೇರ್ಪಡೆಗಾಗಿ ನೆರವು ಒದಗಿಸುವುದಕ್ಕಾಗಿ ಸಂಪೂರ್ಣ ಶಾಲಾ ಅಭಿವೃದ್ಧಿ ವಿಧಾನವನ್ನು ಸಕ್ರಿಯಗೊಳಿಸು ವುದಕ್ಕಾಗಿ ಶಿಕ್ಷಕರು, ವಿಶೇಷ ಶಿಕ್ಷಕರು, ಆಡಳಿತ ಮಂಡಳಿಯವರು, ಅಂಗವೈಕಲ್ಯತೆ ಹೊಂದಿರುವ ಕುಟುಂಬದ ಸದಸ್ಯರು ಸೇರಿದಂತೆ ಎಲ್ಲಾ ಸಹಭಾಗಿಗಳೊಂದಿಗೆ ಸಹಯೋಗ ಮತ್ತು ಸಂವಾದವನ್ನು ಸಾಧಿಸುವುದು ಇಂದಿನ ತುರ್ತು ಅಗತ್ಯವಾಗಿದೆ.


> 'ಕೃತಜ್ಞತೆಯ ಸಂಕೇತವಾಗಿ ಏನಾದರೂ ಒಂದನ್ನು ಸಮಾಜಕ್ಕೆ ಮರಳಿ ನೀಡಲು ಪ್ರಯತ್ನಿಸುವುದು, ಮಾನವರು ಬದುಕಬೇಕಾದ ಸರಿಯಾದ ದಾರಿಯಾಗಿದೆ.'
>
> – ಜಪಾನಿನ ಬೌದ್ಧ ತತ್ತ್ವಶಾಸ್ತ್ರಜ್ಞ ದೈಸಕು ಇಕೇಡ

## ಪರಿಚಯ

ಸಮನ್ವಯ ಶಿಕ್ಷಣವು, ಶಾಲಾ ವ್ಯವಸ್ಥೆಯಲ್ಲಿ ವಿದ್ಯಾರ್ಥಿಗಳ ನೋಂದಣಿಗಾಗಿ ಹೆಣಗಾಡುತ್ತಿರುವ ಭಾರತೀಯ ಉಪಖಂಡದಲ್ಲಿ ತುಲನಾತ್ಮಕವಾಗಿ ಹೊಸ ಪರಿಕಲ್ಪನೆಯಾಗಿದೆ. ವಿಶೇಷಚೇತನ ಮಕ್ಕಳಿಗೆ ಸಂಬಂಧಿಸಿದ ಶಿಕ್ಷಣದ ದೃಷ್ಟಿಕೋನದಲ್ಲಿ ಕಳೆದ ದಶಕದಲ್ಲಿ ಸಾಕಷ್ಟು ಬದಲಾವಣೆ ಉಂಟಾಗಿದೆ. ಭಾರತ ಸರ್ಕಾರವು ವೈಕಲ್ಯತೆ ಹೊಂದಿರುವ ಜನರ ಕುರಿತ ವಿಶ್ವಸಂಸ್ಥೆಯ ಸಮ್ಮೇಳನವನ್ನು (ಯು.ಎನ್.ಸಿ.ಆರ್.ಪಿ.ಡಿ.) ಅನುಮೋದಿಸಿದ ನಂತರ ಕಲ್ಯಾಣಕ್ಕೆ ಒತ್ತು ನೀಡುತ್ತಿದ್ದ ವಿಧಾನದಿಂದ ಮುಂದಕ್ಕೆ ಸಾಗಿ ಮಾನವ ಹಕ್ಕುಗಳಿಗೆ ಗಮನ ನೀಡಲು ಪ್ರಾರಂಭಿಸಲಾಗಿದೆ. ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕೆ ಮಕ್ಕಳ ಹಕ್ಕು ಕಾಯಿದೆ (ಆರ್.ಟಿ.ಇ. ಕಾಯಿದೆ), 2009 ಮತ್ತು ವಿಶೇಷಚೇತನ ವ್ಯಕ್ತಿಗಳ ಹಕ್ಕು ಕಾಯಿದೆ (ಆರ್.ಪಿ.ಡಬ್ಲ್ಯೂ .ಡಿ. ಕಾಯಿದೆ), 2016 – ಇವೆರಡೂ ಕಾಯಿದೆಗಳು ಸಮನ್ವಯ ಶಿಕ್ಷಣಕ್ಕೆ ಪೂರ್ವಸಿದ್ಧತೆಯನ್ನು ಮಾಡಿವೆ. ಮಕ್ಕಳನ್ನು ಶಾಲೆಯಲ್ಲಿ ಉಳಿಸುವುದು ಮತ್ತು ಅವರು ನಡುವೆಯೇ ಶಾಲೆಯನ್ನು ಬಿಡುವ ವಿಚಾರವು ಗಂಭೀರ ಸಮಸ್ಯೆಯಾಗುತ್ತಿರುವ ಈ ಹಂತದಲ್ಲಿ ಈ ಪ್ರಗತಿಪರ ನೀತಿಯು ಶಾಲೆಗಳಲ್ಲಿ ಉತ್ತಮ ಆಚರಣೆಯಾಗಿ ಬದಲಾಗಬಹುದೇ?

ತರಗತಿ ಕೋಣೆಯಲ್ಲಿ ಮಾನವ ವೈವಿಧ್ಯತೆಯನ್ನು ಉತ್ತೇಜಿಸುವ ಹಾಗೂ ಬೆಂಬಲಿಸುವ ಮೂಲಕ ಶಾಲೆಗಳು, ಭಿನ್ನತೆಯನ್ನು ಸ್ವೀಕರಿಸುವ, ಬದುಕಿನ ಮಾನವೀಯ ಅಂಶಗಳ ಮೇಲೆ ತಮ್ಮ ಬುನಾದಿಯನ್ನು ರೂಪಿಸುತ್ತವೆ. ಸಮಕಾಲೀನ ಧನಾತ್ಮಕ ಮನಶ್ಶಾಸ್ತ್ರದ ಪಿತಾಮಹ ಮಾರ್ಟಿನ್ ಸೆಲಿಗ್‌ಮನ್ ಹೀಗೆ ಹೇಳುತ್ತಾರೆ: "ಧನಾತ್ಮಕ ಸಮನ್ವಯ ಶಿಕ್ಷಣವು ಸ್ವಾತಂತ್ರ್ಯ, ನಂಬಿಕೆ ಮತ್ತು ಮಾನವ ವೈವಿಧ್ಯಯತೆಯ ಮೌಲ್ಯಗಳ ಮೇಲೆ ನಿಂತಿದೆ.' 'ಇಂಡೆಕ್ಸ್ ಫಾರ್ ಇನ್ ಕ್ಲೂಷನ್' ಪುಸ್ತಕದ ಲೇಖಕರಾದ ಟೋನಿ ಬೂತ್ ಅವರು, ಶಿಕ್ಷಕರು ಮತ್ತು ವಿದ್ಯಾರ್ಥಿಗಳನ್ನು ಸಮಾನವಾಗಿ ಗುರುತಿಸುವ ಸಮನ್ವಯದ ಪ್ರಜಾತಾಂತ್ರಿಕ ಮತ್ತು ಪಾಲ್ಗೊಳ್ಳುವಿಕೆ ವಿಧಾನದ ಮೌಲ್ಯಗಳ ಪಾತ್ರಕ್ಕೆ ಒತ್ತು ನೀಡಿದ್ದಾರೆ. ಹೊಸ ಸಮನ್ವಯ ಶಾಲಾ ಸಂಸ್ಕೃತಿಯನ್ನು ರೂಪಿಸುವುದಕ್ಕಾಗಿ ಪಠ್ಯಕ್ರಮದ ಹೊಂದಾಣಿಕೆ, ಸಹಯೋಗದ ಕೌಶಲ್ಯಗಳು ಮತ್ತು ಸಾರ್ವತ್ರಿಕ ಮೂಲ ಅಭ್ಯಾಸಕ್ಕೆ ಇಂದಿನ ಶಿಕ್ಷಕರು ಸಿದ್ಧರಾಗಿದ್ದಾರೆಯೇ?

ಡಾಕರ್‌ನಲ್ಲಿ 2000ನೇ ಇಸವಿಯಲ್ಲಿ ನಡೆದ ವಿಶ್ವ ಶಿಕ್ಷಣ ವೇದಿಕೆಗೆ ಮುಂಚಿತವಾಗಿ 1990ರಲ್ಲಿ ತರಬೇತಿಯನ್ನು ಪಡೆದ ವಿಶೇಷ ಶಿಕ್ಷಕಿಯಾಗಿ, ಸಮನ್ವಯ ಶಿಕ್ಷಣದಲ್ಲಿ ಇರುವ ಜಾಗತಿಕ ಹಿತಾಸಕ್ತಿಯನ್ನು ಕಂಡು ಹಿಡಿಯಲು ನಾನು ಉತ್ಸುಕಳಾಗಿದ್ದೆ. ಬಡತನ, ಲಿಂಗ ಮತ್ತು ಸಾಂಸ್ಕೃತಿಕ ಅಂಶಗಳ ಕಾರಣ ಕಡೆಗಣಿಸಲ್ಪಟ್ಟಿರುವ ಇತರ ಮಕ್ಕಳ ಜೊತೆಗೆ ವಿಶೇಷಚೇತನ ಮಗು ಮುಖ್ಯವಾಹಿನಿಯ ಶಾಲೆಗಳಿಗೆ ಹೋಗುವ ವಿಚಾರವು ವೇಗ ಪಡೆಯುತ್ತಿತ್ತು. ಸಮಗ್ರ ಶಿಕ್ಷಣದ ಜೊತೆಗಿನ ನನ್ನ ಮೊದಲ ಮುಖಾಮುಖಿಯು, ಭಾರತ, ಬ್ರೆಜಿಲ್, ದಕ್ಷಿಣ ಆಫ್ರಿಕಾ ಮತ್ತು ಯು.ಕೆ. – ಈ ನಾಲ್ಕು ದೇಶಗಳನ್ನು ಒಳಗೊಂಡಿದ್ದ 'ಇಂಡೆಕ್ಸ್ ಫಾರ್ ಇನ್‌ಕ್ಲೂಷನ್' ಎಂಬ ಕ್ಷೇತ್ರ ಯೋಜನೆಯ ಮೂಲಕ ನಡೆಯಿತು. ಅಂದಿನಿಂದ ಸಮನ್ವಯ ಶಿಕ್ಷಣದ ಕುರಿತ ನನ್ನ ವಿಚಾರವು ಸೂಚ್ಯಂಕದ ತತ್ತ್ವದೊಂದಿಗೆ ಹೊಂದಿಕೆಯಾಗಿದೆ. ಅದೆಂದರೆ:

ಎಲ್ಲಾ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಗಳಿಗೆ ಗೌರವ ನೀಡಬೇಕು ಹಾಗೂ ಶಾಲಾ ಸಮುದಾಯಗಳಲ್ಲಿ ಅವರ ಪಾಲ್ಗೊಳ್ಳುವಿಕೆ ಮತ್ತು ಸಹಯೋಗವನ್ನು ವೃದ್ಧಿಸಲು ಎಲ್ಲಾ ಪ್ರಯತ್ನಗಳನ್ನು ಮಾಡಬೇಕು. ಶಿಕ್ಷಕರು, ವಿದ್ಯಾರ್ಥಿ ಮತ್ತು ಸಮುದಾಯದ ಸದಸ್ಯರು ಒಟ್ಟುಗೂಡಿ ಇರುವ ಅಡೆತಡೆಗಳನ್ನು ಕಡಿಮೆ ಮಾಡಿ, ಕಲಿಕೆಯ ಅವಕಾಶವನ್ನು ಹೆಚ್ಚಿಸುವುದಕ್ಕೆ ಇದು ಸಂಬಂಧಿಸಿದೆ. ಸಮನ್ವಯ ಶಿಕ್ಷಣವು ಶಾಲೆಯ ಸಂಪೂರ್ಣ ಬೆಳವಣಿಗೆಗೆ ಸಂಬಂಧಿಸಿದೆ.

## ಸಮನ್ವಯ ಶಿಕ್ಷಣ ಮತ್ತು ಶಾಸನ: ಆಗ ಮತ್ತು ಈಗ

'ಎಲ್ಲರಿಗೂ ಶಿಕ್ಷಣ' ಗುರಿಗಳಲ್ಲಿ ವೈಕಲ್ಯ ಹೊಂದಿರುವ ಮಕ್ಕಳ ಶಿಕ್ಷಣದ ಸೇರಪ್ಡೆಯು 2002ರಲ್ಲಿ ಭಾರತದ ಸಂವಿಧಾನಕ್ಕೆ ಮಾಡಿದ 86ನೇ ತಿದ್ದುಪಡಿಯ ನಂತರ ಉಂಟಾಯಿತು. ಸಂವಿಧಾನದ ಅನುಚ್ಛೇದ 21–ಎ, ಶಿಕ್ಷಣವನ್ನು ಮೂಲಭೂತ ಹಕ್ಕಾಗಿ ಖಾತರಿಪಡಿಸುತ್ತದೆ ಹಾಗೂ 6–14 ವರ್ಷ ವಯೋವರ್ಗದ ಎಲ್ಲಾ ಮಕ್ಕಳಿಗೆ ದೇಶವು ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ನೀಡಬೇಕು ಎಂದು ಹೇಳುತ್ತದೆ. ಆದರೆ 2009ರಲ್ಲಿ ಸಂಸತ್ತಿನಲ್ಲಿ ಆರ್.ಟಿ.ಇ. ಕಾಯಿದೆಯನ್ನು ಅಂಗೀಕರಿಸುವ ತನಕ ಇದು ಜಾರಿಗೆ ಬಂದಿರಲಿಲ್ಲ. ಮೊತ್ತಮೊದಲ ಬಾರಿಗೆ ಈ ಕಾಯಿದೆಯು, ವಿಶೇಷಚೇತನ ಮಕ್ಕಳನ್ನು ಮುಖ್ಯವಾಹಿನಿಯ ಶಿಕ್ಷಣ ವ್ಯವಸ್ಥೆಯೊಳಗೆ ಸೇರ್ಪಡೆಗೊಳಿಸುವುದನ್ನು ಕಡ್ಡಾಯ ಗೊಳಿಸಿತು.

ಇದೇ ದಶಕದಲ್ಲಿ ಭಾರತ ಸರ್ಕಾರವು ಯು.ಎನ್.ಸಿ.ಆರ್.ಪಿ.ಡಿ.–2007 ಅನ್ನು ಸಹ ಅಂಗೀಕರಿಸಿತು. ವಿಶೇಷಚೇತನ ವ್ಯಕ್ತಿಗಳ (ಸಮಾನ ಅವಕಾಶಗಳು, ಹಕ್ಕುಗಳ ರಕ್ಷಣೆ ಮತ್ತು ಸಂಪೂರ್ಣ ಪಾಲ್ಗೊಳ್ಳುವಿಕೆ) ಕಾಯಿದೆ, 1995ರ ಸ್ಥಾನದಲ್ಲಿ ಆರ್.ಪಿ.ಡಬ್ಲ್ಯು.ಡಿ. ಕಾಯಿದೆ, 2016 ಜಾರಿಗೆ ಬಂತು.

ಈ ಲೇಖನದಲ್ಲಿ, ಈ ಶಾಸನಾತ್ಮಕ ಉಪಕ್ರಮಗಳಲ್ಲಿ ಸಮನ್ವಯ ಶಿಕ್ಷಣಕ್ಕೆ ಸಂಬಂಧಿಸಿದ ವಿಭಾಗಗಳನ್ನು ನಾವು ಪರಿಶೀಲಿಸಲಿದ್ದೇವೆ ಹಾಗೂ ಗುಣಮಟ್ಟದ ಕಲಿಕೆಯ ಪರಿಣಾಮದ ಕುರಿತು ಪರ್ಯಾಲೋಚನೆ ನಡೆಸಲಿದ್ದೇವೆ.

- ಮೊದಲಿಗೆ ನಾವು ಆರ್.ಟಿ.ಇ. ಕಾಯಿದೆಯನ್ನು ಸಮನ್ವಯ ಶಿಕ್ಷಣ, ವೈಕಲ್ಯ ಮತ್ತು ಗುಣಮಟ್ಟದ ಶಿಕ್ಷಣದ ಲಭ್ಯತೆಯ ಹಿನ್ನೆಲೆಯಿಂದ ನೋಡೋಣ.
- ನಂತರ ಆರ್.ಪಿ.ಡಬ್ಲ್ಯು.ಡಿ. ಕಾಯಿದೆ, ಯು.ಎನ್.ಸಿ.ಪಿ.ಆರ್.ಡಿ. ಜೊತೆಗೆ ಇದರ ಹೊಂದಿಕೆ ಮತ್ತು ಪರಿಸರದ ಅಡೆತಡೆಗಳನ್ನು ಸಂಯೋಜಿಸುವ, ವೈಕಲ್ಯತೆಯ ಹೊಸ ವ್ಯಾಖ್ಯೆಗಳನ್ನು ನೋಡೋಣ.
- ಅಂತಿಮವಾಗಿ ಈ ಕಾಯಿದೆಗಳನ್ನು ಒಟ್ಟಿಗೆ ಅಧ್ಯಯನ ಮಾಡುತ್ತ, ಶಾಲೆಗಳು ಸಮನ್ವಯ ಸಾಧಿಸುವುದಕ್ಕಾಗಿ ಸರ್ವತ್ರಿಕ ಶಿಕ್ಷಣದ ಯು.ಎನ್.ಸಿ.ಆರ್.ಪಿ.ಡಿ. ಪರಿಕಲ್ಪನೆಯನ್ನು ಪರಿಗಣಿಸೋಣ.

## ಆರ್.ಟಿ.ಇ. ಕಾಯಿದೆ

'ಶಿಕ್ಷಣ ಹಕ್ಕು' ಶಿಕ್ಷಣದಲ್ಲಿ ವೈವಿಧ್ಯತೆಯನ್ನು ಸೂಚಿಸುತ್ತದೆ. ಎಲ್ಲಾ ಮಕ್ಕಳು ಶಾಲೆಯಲ್ಲಿರಬೇಕು ಎನ್ನುವ ಪರಿಕಲ್ಪನೆಯ ಅಡಿಯಲ್ಲಿ ಆರ್.ಟಿ.ಇ ಕಾಯಿದೆಯನ್ನು ರೂಪಿಸಲಾಗಿದೆ. 'ಶೂನ್ಯ ತಿರಸ್ಕಾರ ನೀತಿ'ಯಿಂದ ಬೆಂಬಲಿಸಲ್ಪಟ್ಟ ಶಾಲಾ ವಾತಾವರಣದ ಜೊತೆಗೆ ಈ ಕಾಯಿದೆಯು, ಶಿಕ್ಷಕರ ಸೂಕ್ತ ತರಬೇತಿ, ತಡೆರಹಿತ ಮೂಲಸೌಕರ್ಯ ಮತ್ತು ಸುಧಾರಿತ ಶಿಕ್ಷಣಶಾಸ್ತ್ರೀಯ ಮತ್ತು ಪಠ್ಯಕ್ರಮದ ________ ಮೂಲಕ ಶಾಲಾ ಗುಣಮಟ್ಟದಲ್ಲಿ ಸುಧಾರಣೆಯನ್ನು ಒದಗಿಸುತ್ತದೆ. ಅಂತಿಮವಾಗಿ, ಆರ್.ಟಿ.ಇ. ಕಾಯಿದೆಯು, ಸರ್ಕಾರವು ಶಾಲಾ ಸಂಸ್ಥೆಗಳ ಮೇಲ್ವಿಚಾರಣೆಯನ್ನು ನಡೆಸುವುದು ಮತ್ತು ಆಡಳಿತ ಮತ್ತು ಶಾಲಾಭಿವೃದ್ಧಿ ಯೋಜನೆಗಳನ್ನು ಸುಧಾರಿಸುವುದನ್ನು ಕಡ್ಡಾಯವಾಗಿಸುತ್ತದೆ.

ದಕ್ಷಿಣ ತಮಿಳುನಾಡಿನ ಕಡಲ ತಡಿಯ ಪಟ್ಟಣವೊಂದರ ಗೃಹಿಣಿಯು ತನ್ನ ಮಗಳಾದ ಫಾತಿಮಾಳ ಕುರಿತು ಹೇಳಿದ ಕಥೆಯು ಆರ್.ಟಿ.ಇ. ಕಾಯಿದೆಯ ಜಾರಿಗೊಳಿಸುವಿಕೆಯಲ್ಲಿ ಇರುವ ಸವಾಲುಗಳನ್ನು ತೋರಿಸಿ ಕೊಡುತ್ತದೆ. ಎಂಟು ವರ್ಷ ವಯಸ್ಸಿನ ಫಾತಿಮಾಳು ಸಾಕಷ್ಟು ಕಾಲ ಕಾದ ನಂತರ 'ಒಳ್ಳೆಯ' ಶಾಲೆಯಲ್ಲಿ ಸೇರ್ಪಡೆಗೊಳ್ಳಲು ಆತುರಗೊಂಡಿದ್ದಳು. ಆರ್.ಟಿ.ಇ ಜಾರಿಗೆ ಬಂದ ನಂತರ ತನ್ನ ನೆರೆಹೊರೆಯ ಯಾವುದೇ ಶಾಲೆಗೆ ಸೇರಲು ಫಾತಿಮಾ ಅರ್ಹತೆಯನ್ನು ಪಡೆದಿದ್ದಳು. ಆದರೆ ಪ್ರವೇಶ ಪ್ರಕ್ರಿಯೆ ಮುಗಿದ ನಂತರ ಅವಳನ್ನು ವಿಶೇಷ ಘಟಕದಲ್ಲಿ ಇಡಲಾಯಿತು. ಆಕೆಯು ಇಂಗ್ಲಿಷ್ ಮತ್ತು ತಮಿಳು ಅಕ್ಷರಮಾಲೆಗಳ ಮೇಲೆ ಹಿಡಿತ ಸಾಧಿಸುವ ತನಕ ಅಲ್ಲಿಯೇ ಇರಬೇಕಿತ್ತು. ಫಾತಿಮಾಳು ಐದು ವರ್ಷ ವಯಸ್ಸಿನವಳಾಗಿದ್ದಾಗ ಆಕೆ ಮಂದಬುದ್ಧಿಯವಳೆಂದು ತಪ್ಪಾಗಿ ನಿರ್ಣಯಿಸಲಾಗಿತ್ತು. ಆದರೆ ಆಕೆ ಬೆಳೆದಂತೆ, ಆಕೆಗೆ ಬೆಳವಣಿಗೆಯ ಸಮನ್ವಯ ಸಂಬಂಧಿ ಅಸ್ವಸ್ಥತೆ ಇದೆ ಎಂಬುದು ಸ್ಪಷ್ಟವಾಯಿತು. ಇದರಿಂದಾಗಿ ಬರವಣಿಗೆಯು ಆಕೆಯ ಪಾಲಿಗೆ ತುಂಬಾ ಸವಾಲಿನ ವಿಷಯವಾಗಿತ್ತು. ಆಕೆಯ ಸಾಮಾನ್ಯ ಜ್ಞಾನವು ಅದ್ಭುತವಾಗಿತ್ತು. ಆದರೆ ಡಿಸ್ಗ್ರಾಫಿಯಾದ ಕಾರಣ ಆಕೆಯು ಬರೆಯುವುದು ಅಸಾಧ್ಯದ ಮಾತಾಗಿತ್ತು. ಆಕೆ ಎದುರಿಸಿದ ಅಡೆತಡೆಗಳು ಮನೋಭಾವಕ್ಕೆ ಸಂಬಂಧಿಸಿದ್ದವು: ಮಗುವೊಂದು ಬರೆಯದೆಯೇ ಶಾಲೆಯಲ್ಲಿ ಹೇಗೆ ಮುಂದುವರಿಯಬಹುದು ಎಂಬುದು ಶಾಲಾ ಮುಖ್ಯಸ್ಥರಿಗೆ ಅರ್ಥವಾಗಲೇ ಇಲ್ಲ.

ಆರ್.ಟಿ.ಇ. ಅಡಿಯಲ್ಲಿ, ಫಾತಿಮಾಳಂತಹ 6ರಿಂದ 14 ವರ್ಷಗಳ ವಯಸ್ಸಿನ ನಡುವಿನ ಮಗುವು, ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಪಡೆಯುವುದಕ್ಕಾಗಿ ಪಕ್ಕದ ಶಾಲೆಗೆ ದಾಖಲಾತಿಯನ್ನು ಪಡೆಯುವ ಹಕ್ಕನ್ನು ಹೊಂದಿದ್ದಾಳೆ. ಈ ಕಾಯಿದೆಯು, 'ಮಗು' ಎಂದರೆ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಮಕ್ಕಳು, ಸಾಮಾಜಿಕ, ಆರ್ಥಿಕ, ಲಿಂಗ ಮತ್ತು ಧಾರ್ಮಿಕ ಅಂಶಗಳಿಂದಾಗಿ ಅನನುಕೂಲತೆಗೆ ಈಡಾದ ಮಕ್ಕಳು, ಮತ್ತು ಕೊನೆಯದಾಗಿ ವಿಶೇಷಚೇತನ ಮಕ್ಕಳನ್ನು ಒಳಗೊಂಡಿರುತ್ತದೆ ಎಂದು ಹೇಳುತ್ತದೆ. ಹೊಸ ಕಾನೂನಿನ ಅಡಿಯಲ್ಲಿ, ತನ್ನ ಮನೆಯಿಂದ ಸುಮಾರು ಒಂದು ಕಿಲೋಮೀಟರ್ ದೂರ ಇರುವ ಶಾಲೆಯಲ್ಲಿ ಫಾತಿಮಾಳನ್ನು ದಾಖಲು ಮಾಡಲಾಯಿತು.

ಆರ್.ಟಿ.ಇ. ಕಾಯಿದೆಯ ಇನ್ನೊಂದು ಧನಾತ್ಮಕ ಅಂಶವೆಂದರೆ, 'ಗುಣಮಟ್ಟದ ಶಿಕ್ಷಣದ ಲಭ್ಯತೆ'ಗೆ ಒತ್ತು ನೀಡುವುದು. ಇದು ಕಲ್ಯಾಣ ವಿಧಾನದಿಂದ ಹಕ್ಕು ಆಧರಿತ ವಿಧಾನಕ್ಕೆ ಗಮನವನ್ನು ಕೇಂದ್ರೀಕರಿಸುವುದನ್ನು ಪ್ರತಿಫಲಿಸುತ್ತದೆ ಹಾಗೂ ಮಗುವು ಸರ್ಕಾರದಿಂದ ಗುರುತಿಸಿದ ಶಾಲೆಯಲ್ಲಿ ಇರುವುದನ್ನು ಖಾತರಿ ಪಡಿಸುವುದನ್ನು ಸರ್ಕಾರದ ಶಾಸನಬದ್ಧ ಜವಾಬ್ದಾರಿಯನ್ನಾಗಿಸುತ್ತದೆ. ಈ ಕಾಯಿದೆಯ ಮಾರ್ಗದರ್ಶಿ ತತ್ತ್ವಗಳು, ಮಗುವಿನ

ನೋಂದಣಿಯನ್ನೂ ಮೀರಿ ಗುಣಮಟ್ಟದ ಕಲಿಕೆಯ ಬದ್ಧತೆಯನ್ನೂ ನೀಡುತ್ತದೆ.

- ಸೆಕ್ಷನ್ 19ರ ಅಡಿಯಲ್ಲಿ, ಮಗುವು, 'ಅಗತ್ಯ ನಿಯಮಗಳು ಮತ್ತು ಮಾನದಂಡಗಳನ್ನು ಈಡೇರಿಸುವ ಔಪಚಾರಿಕ ಶಾಲೆಯಲ್ಲಿ ಸಮಾನ ಗುಣಮಟ್ಟದ ಪೂರ್ಣಕಾಲಿಕ ಶಿಕ್ಷಣ'ವನ್ನು ಪಡೆಯುವ ಅರ್ಹತೆಯನ್ನು ಹೊಂದಿರುತ್ತದೆ.
- ಆರ್.ಟಿ.ಇ ಯ ನಿಯಮಗಳು ಮತ್ತು ಮಾನದಂಡಗಳು, ಶಾಲಾ ಸಾಮಗ್ರಿ, ತರಗತಿ ಕೋಣೆಗಳು ಮತ್ತು ಕಟ್ಟಡಕ್ಕೆ ತಡೆರಹಿತ ಪ್ರವೇಶವಕಾಶವನ್ನು ಕಡ್ಡಾಯಗೊಳಿಸುತ್ತವೆ.

'ಗುಣಮಟ್ಟದ ಶಿಕ್ಷಣದ ಲಭ್ಯತೆ' ಎಂದರೆ ಮಗುವು ಪೂರ್ಣ ಸಾಮರ್ಥ್ಯವನ್ನು ಪ್ರದರ್ಶಿಸಲು ಮತ್ತು ಬೆಳೆಸಲು ಅನುವು ಮಾಡಿ ಕೊಡುವ ಪರಿಸರವನ್ನು ಸೃಷ್ಟಿ ಮಾಡುವುದಾಗಿದೆ. ಫಾತಿಮಾಳು ಪ್ರವೇಶದ ಹಂತದಲ್ಲಿಯೇ ಸಾಂಪ್ರದಾಯಿಕ ಶಾಲಾ ಅಡೆತಡೆಗಳನ್ನು ಎದುರಿಸಿದಳು. ಇದನ್ನು ಮೀರಿ ಮುಂದೆ ಸಾಗಬೇಕಾದರೆ ಎಲ್ಲರಿಗೂ ಕಲಿಕೆ ಮತ್ತು ಪಾಲ್ಗೊಳ್ಳುವಿಕೆಯನ್ನು ಉತ್ತೇಜಿಸುತ್ತ ಶೈಕ್ಷಣಿಕ ಸುಧಾರಣೆ ಮತ್ತು ಪ್ರಗತಿಪರ ನಾಯಕತ್ವದ ಅಗತ್ಯವಿದೆ.

### ಆರ್.ಟಿ.ಇ ಮತ್ತು ಮುಂದಿರುವ ಸವಾಲುಗಳು

ಆರ್.ಟಿ.ಇ. ಕಾಯಿದೆಯ ಸೆಕ್ಷನ್ 12(1) (ಸಿ) ಅಡಿಯಲ್ಲಿ, ಖಾಸಗಿ ಶಾಲೆಗಳಲ್ಲಿ ಶೇಕಡ 25ರಷ್ಟು ಸೀಟುಗಳನ್ನು ಸಮಾಜದಲ್ಲಿ ಅನನುಕೂಲತೆಗೆ ಒಳಗಾದ ವರ್ಗಗಳ ಮಕ್ಕಳಿಗೆ ಮೀಸಲಿಡಲಾಗಿದೆ. ಫಾತಿಮಾ ತನ್ನ ನೆರೆಹೊರೆಯ ಶಾಲೆಯಲ್ಲಿ ಪ್ರವೇಶ ಪಡೆದಳು. ಆದರೆ ವಿಶೇಷ ಘಟಕದಿಂದ ಖಾಯಂ ತರಗತಿ ಕೋಣೆಗೆ ಮುಂಬಡ್ತಿ ಪಡೆದಳೇ? ಆರ್.ಟಿ.ಇ. ಕಾಯಿದೆಯ ಸೆಕ್ಷನ್ 21ರ ಪ್ರಕಾರ, ಕಡ್ಡಾಯವಾಗಿ ಇರಲೇಬೇಕಾದ ಶಾಲಾಡಳಿತ ಸಮಿತಿಗಳು ಶಾಲಾಭಿವೃದ್ಧಿ ಯೋಜನೆಯನ್ನು ರೂಪಿಸುವ ಜವಾಬ್ದಾರಿಯನ್ನು ಹೊಂದಿವೆ. ಒಂದು ವೇಳೆ ಕಾಯಿದೆಯು ಹೇಳುವಂತೆ ಪಠ್ಯಕ್ರಮವು ನಿಜವಾಗಿಯೂ ಮಕ್ಕಳ ಕೇಂದ್ರಿತ ಮತ್ತು ಮಕ್ಕಳ ಸ್ನೇಹಿ ಆಗಿದ್ದರೆ ಪರಿಸರವೂ ಕೂಡ ಭಯ, ಆತಂಕ ಮತ್ತು ಆಘಾತದಿಂದ ಮುಕ್ತವಾಗಿರುತ್ತದೆ ಹಾಗೂ ಫಾತಿಮಾಳು ಸಹ ಬರೆಯುವುದರಲ್ಲಿ ಹೊಂದಿರುವ ಅಸಾಮರ್ಥ್ಯದ ಹೊರತಾಗಿಯೂ ತನ್ನ ಸಹಪಾಠಿಗಳೊಂದಿಗೆ ಕಲಿಯಬಹುದಾಗಿದೆ.

ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಮಂಡಳಿಯ (ಎನ್.ಸಿ.ಇ.ಆರ್.ಟಿ) ವೆಬ್‌ಸೈಟ್‌ನಲ್ಲಿ ಪ್ರಾಥಮಿಕ ಶಾಲೆಗಳ 'ಕಲಿಕಾ ಫಲಿತಾಂಶಗಳ' ದಾಖಲೆಗಳು, ಸಮನ್ವಯ ಸೂಚಿಯ ಮಾರ್ಗದರ್ಶಿ ಪುಸ್ತಕ, ಮತ್ತು ಮೌಲ್ಯಮಾಪನದಲ್ಲಿ 'ಹೊಂದಾಣಿಕೆಗಳು ಮತ್ತು ತಿದ್ದುಪಡಿಗಳನ್ನು' ಮಾಡಲು ಸಲಹೆಗಳಿಗೆ ಸಂಬಂಧಪಟ್ಟಂತೆ ದಾಖಲೆಗಳಿಗಾಗಿ ಕೊಂಡಿ/ಲಿಂಕ್‌ಗಳನ್ನು ನೀಡಲಾಗಿದೆ. ಹಾಗಾದರೆ ಗುಣಮಟ್ಟದ ಶಿಕ್ಷಣದ ವಿಚಾರವನ್ನು ಬಗೆಹರಿಸಿದಂತೆ ಆಯಿತೇ? ಜಾರಿಗೊಳಿಸಿದ ಆರು ವರ್ಷಗಳಲ್ಲಿ ಆರ್.ಟಿ.ಇ. ಮಾಡಿದ ಸಾಧನೆಗಳ ಕುರಿತು 2016ರಲ್ಲಿ ಹೊರಬಂದ ಕೆ.ಪಿ.ಎಂ.ಜಿ. ಮೌಲ್ಯಮಾಪನ ವರದಿಯು, ಕಲಿಕೆಯ ಗುಣಮಟ್ಟದ ಕುರಿತು ಚರ್ಚೆಯಲ್ಲಿ ಕಾಣಿಸಿಕೊಳ್ಳುವ ಸವಾಲುಗಳನ್ನು ಎತ್ತಿ ತೋರಿಸುತ್ತದೆ. ಸರ್ಕಾರವು ಇಲ್ಲಿಯ ತನಕ ಸಾರ್ವತ್ರಿಕ ದಾಖಲಾತಿ ಮತ್ತು ಮೂಲಸೌಕರ್ಯದ ಅಭಿವೃದ್ಧಿಗೆ ಗಮನ ನೀಡಿದ್ದು, ಇನ್ನು ಮುಂದೆ ಕಲಿಕೆಯ ಗುಣಮಟ್ಟಕ್ಕೆ ಗಮನ ನೀಡಬೇಕಿದೆ ಎಂದು ಕೆ.ಪಿ.ಎಂ.ಜಿ.ಯ ಶಿಕ್ಷಣ ವಿಭಾಗದ ಮುಖ್ಯಸ್ಥರು ಹೇಳಿದ್ದಾರೆ. 2014 ರಲ್ಲಿ ಹೊರತಂದ ಶಿಕ್ಷಣದ ವಾರ್ಷಿಕ ಸ್ಥಿತಿಗತಿ ವರದಿಯ ಪ್ರಕಾರ, ಐದನೇ ತರಗತಿಯ ಶೇಕಡಾ 50ರಷ್ಟು ಮತ್ತು 8ನೇ ತರಗತಿಯ ಶೇಕಡಾ 25ರಷ್ಟು ವಿದ್ಯಾರ್ಥಿಗಳಿಗೆ 2ನೇ ತರಗತಿಯ ಪಠ್ಯವನ್ನು ಓದಲು ಬರುವುದಿಲ್ಲ. ಸಂಖ್ಯಾಜ್ಞಾನದ ಕಲಿಕಾ ಫಲಿತಾಂಶದ ಕುರಿತ ಇದೇ ರೀತಿಯ ಅಂಕಿಅಂಶಗಳು, ಅರ್ಥ ಮಾಡಿಕೊಳ್ಳುವುದು ಮತ್ತು ಅನ್ವಯಿಸುವಿಕೆಯ ಮೂಲಕ ಕಲಿಕೆಯನ್ನು ಉತ್ತೇಜಿಸುವ ಶಿಕ್ಷಣಶಾಸ್ತ್ರ ಮತ್ತು ಶಿಕ್ಷಕ–ವಿದ್ಯಾರ್ಥಿ ಸಂವಾದಗಳ ಅಗತ್ಯವಿದೆ ಎಂಬುದನ್ನು ತೋರಿಸುತ್ತವೆ.

### ಆರ್.ಪಿ.ಡಬ್ಲ್ಯೂ.ಡಿ ಕಾಯಿದೆ, 2016

ಪಿ.ಡಬ್ಲ್ಯೂ.ಡಿ. ಕಾಯಿದೆಯ ಬದಲಿಗೆ ಆರ್.ಪಿ.ಡಬ್ಲ್ಯೂ.ಡಿ ಕಾಯಿದೆ, 2016 ಅನ್ನು ಜಾರಿಗೆ ತಂದಿದ್ದು ವಿಶೇಷಚೇತನ ಹಕ್ಕುಗಳ ಚಳುವಳಿಯ ಇತಿಹಾಸದಲ್ಲಿ ವಿಶೇಷ ಕ್ಷಣವೆನಿಸಿದೆ. ವಿಶೇಷಚೇತನ ಕಾರ್ಯಕರ್ತರು ಭಾಗೀದಾರಿಗಳಾಗಿ ಪ್ರಮುಖ ಪಾತ್ರವನ್ನು ವಹಿಸಿದ್ದು, ಸಾಮಾಜಿಕ ಬದಲಾವಣೆಯನ್ನು ತರುವುದಕ್ಕಾಗಿ ಸಾಕಷ್ಟು ಕೆಲಸ ಮಾಡಿದ್ದಾರೆ ಹಾಗೂ ತಮ್ಮ ಚಳುವಳಿಯು ಹೊಸ ಹಂತವನ್ನು ಪ್ರವೇಶಿಸುತ್ತಿದೆ ಎಂದು ಹೇಳಿದ್ದಾರೆ. ಹೊಸ ಕಾನೂನು ಯು.ಎನ್.ಸಿ.ಆರ್.ಪಿ.ಡಿ.ಗೆ ಅನುಗುಣವಾಗಿದ್ದು ಇದರ ತತ್ತ್ವಶಾಸ್ತ್ರೀಯ ತಳಹದಿಯು ಪರಿವರ್ತಕ ಎನಿಸಿದೆ ಹಾಗೂ ಇದು ಸಾಮಾಜಿಕ ಕಲ್ಯಾಣದಿಂದ ಮಾನವ ಹಕ್ಕುಗಳತ್ತ ಗಮನವನ್ನು ಕೇಂದ್ರೀಕರಿಸುತ್ತದೆ. ಪಿ.ಡಬ್ಲ್ಯೂ.ಡಿ. ಕಾಯಿದೆಗೆ ವ್ಯತಿರಿಕ್ತವಾಗಿ ಆರ್.ಪಿ.ಡಬ್ಲ್ಯೂ.ಡಿ. ಕಾಯಿದೆಯ ಪೀಠಿಕೆಯು 'ವಿಶೇಷಚೇತನ ವ್ಯಕ್ತಿಗಳ ಸಬಲೀಕರಣದ ತತ್ತ್ವಗಳನ್ನು' ಪ್ರತಿಪಾದಿಸುತ್ತದೆ. ಅವುಗಳೆಂದರೆ:

- ಅಂತರ್ಗತ ಘನತೆಗೆ ಗೌರವ
- ಭಿನ್ನತೆಯನ್ನು ಗೌರವಿಸುವುದು ಮತ್ತು ಪಿ.ಡಬ್ಲ್ಯೂ.ಡಿ ಯನ್ನು ಮಾನವ ವೈವಿಧ್ಯತೆ ಮತ್ತು ಮನುಷ್ಯತ್ವದ ಅಂಗವಾಗಿ ಸ್ವೀಕರಿಸುವುದು
- ಸುಲಭ ಲಭ್ಯತೆ ಮತ್ತು ಸಮಾನ ಅವಕಾಶ, ಮತ್ತು
- ವಿಕಸನಗೊಳ್ಳುತ್ತಿರುವ ಮತ್ತು ಚಲನಶೀಲ ಪರಿಕಲ್ಪನೆಯಾಗಿ ಅಂಗವೈಕಲ್ಯ. (ಈ ಪರಿಕಲ್ಪನೆಯು ವಿಶ್ವಸಂಸ್ಥೆಯ ಹಕ್ಕುಗಳ ಕುರಿತ ಸಮಾವೇಶದ ಊಹೆಗಳನ್ನು ಆಧರಿಸಿದೆ. ಇಲ್ಲಿ ಮಕ್ಕಳು ತಮ್ಮ ಹಕ್ಕುಗಳನ್ನು ಚಲಾಯಿಸುವ ಮಕ್ಕಳ ಸಾಮರ್ಥ್ಯವನ್ನು ವಯಸ್ಕರು ಪರಿಗಣಿಸುತ್ತಾರೆ.)

### ಮೂಲ ಪೂರ್ವಸಿದ್ಧತೆಗಳು ಮತ್ತು ಜಾರಿಗೊಳಿಸುವಿಕೆಯ ಕ್ರಮಗಳು

ಪಿ.ಡಬ್ಲ್ಯೂ.ಡಿ. ಕಾಯಿದೆ, 1995ಕ್ಕೆ ತದ್ವಿರುದ್ಧವಾಗಿ, ಆರ್.ಪಿ. ಡಬ್ಲ್ಯೂ.ಡಿ. ಕಾಯಿದೆ, 2009 ಸಮನ್ವಯ ಶಿಕ್ಷಣವನ್ನು ಒದಗಿಸುತ್ತದೆ. 'ಇದೊಂದು ವಿಶೇಷಚೇತನ ಮತ್ತು ವಿಶೇಷಚೇತನವಲ್ಲದ ವಿದ್ಯಾರ್ಥಿಗಳು ಒಟ್ಟಿಗೆ ಕಲಿಯುವ ಶಿಕ್ಷಣದ ವ್ಯವಸ್ಥೆಯಾಗಿದ್ದು, ಬೋಧನೆ ಮತ್ತು ಕಲಿಕೆಯ ವ್ಯವಸ್ಥೆಯನ್ನು ವಿಶೇಷಚೇತನದ ವಿವಿಧ ಪ್ರಕಾರಗಳ ಕಲಿಕಾ ಅಗತ್ಯತೆಗಳನ್ನು ಪೂರೈಸುವುದಕ್ಕಾಗಿ ಸೂಕ್ತವಾಗಿ ಹೊಂದಿಸಲಾಗುತ್ತದೆ' ಎಂದು ಸಮನ್ವಯ ಶಿಕ್ಷಣವನ್ನು ಇದು ವ್ಯಾಖ್ಯಾನಿಸುತ್ತದೆ. ಇದು ಮೂಲಭೂತ ಅಗತ್ಯತೆಗಳು ಮತ್ತು ಜಾರಿಗೊಳಿಸುವಿಕೆಯ ದಾರಿಗಳನ್ನು ಸಹ ವಿವರಿಸುತ್ತದೆ.

ಆರ್.ಪಿ.ಡಬ್ಲ್ಯೂ.ಡಿ. ಕಾಯಿದೆಯ ವ್ಯಾಪ್ತಿಯ ಅಡಿ ಉಂಟಾಗಿರುವ ಪ್ರಮುಖ ಬೆಳವಣಿಗೆಯೆಂದರೆ (ಔಪಚಾರಿಕ ಶಾಲೆಗಳ ಪಾಲಿಗೆ ಇದು ತುಂಬಾ ಪ್ರಮುಖವಾದುದು), ವಿವಿಧ ಪ್ರಕಾರಗಳ 21 ವಿಶೇಷಚೇತನಗಳನ್ನು ಸೇರಿಸಿರುವುದು. ಪಿ.ಡಬ್ಲ್ಯೂ.ಡಿ ಕಾಯಿದೆಯಲ್ಲಿ ಏಳು ಮೂಲ ವಿಶೇಷಚೇತನಗಳು ಮಾತ್ರವೇ ಇದ್ದರೆ, ಇಲ್ಲಿ 14 ಬಗೆಯ ವಿಶೇಷಚೇತನಗಳನ್ನು ಹೆಚ್ಚುವರಿಯಾಗಿ ಸೇರಿಸಲಾಗಿದೆ. ಮೊಟ್ಟಮೊದಲ ಬಾರಿಗೆ ಸ್ವಲೀನತೆ, ನಿರ್ದಿಷ್ಟ ಕಲಿಕಾ ವೈಕಲ್ಯತೆ ಮತ್ತು ಮಾತು ಹಾಗೂ ಭಾಷಾ ವೈಕಲ್ಯತೆ ಹೊಂದಿರುವ ಮಕ್ಕಳು ಸಮನ್ವಯ ಶಿಕ್ಷಣಕ್ಕೆ ಅರ್ಹರಾಗುತ್ತಾರೆ.

ಆರು ವರ್ಷ ಹರೆಯದ ಸಾಜನ್ ಮೂರು ವರ್ಷದವನಿದ್ದಾಗ ಆತನಲ್ಲಿ ವ್ಯಾಪಕವಾದ ಬೆಳವಣಿಗೆಯ ಅಸ್ವಸ್ಥತೆ (ಸಾಮಾಜಿಕ, ಭಾಷೆ ಮತ್ತು ಸಂವಹನ ಕೌಶಲ್ಯಗಳಿಗೆ ಸಂಬಂಧಿಸಿದ ಅಸ್ವಸ್ಥತೆ) ಇರುವುದನ್ನು ಗುರುತಿಸಲಾಗಿತ್ತು. ಸಾಜನ್ ಒಳ್ಳೆಯ ಮನಸ್ಸಿನ ವಿದ್ಯಾರ್ಥಿಯಾಗಿದ್ದು, ಪ್ರತಿ ದಿನವೂ ಶಾಲೆಯಲ್ಲಿ ಉಂಟಾಗುವ ಪರಿವರ್ತನೆಯನ್ನು ಮೈಗೂಡಿಸಿಕೊಳ್ಳಲು ಹೆಣಗಾಡುತ್ತಿದ್ದ. ಆತನ ತಾಯಿಯು ಶಿಕ್ಷಕಿಯ ಜೊತೆಗೆ ನಡೆಸಿದ ಸಂವಾದದ ಕಾರಣ, ಆತನಿಗೆ ಐದು ನಿಮಿಷಗಳಿಗಿಂತ ಹೆಚ್ಚು ಕಾಲ ತರಗತಿಯಲ್ಲಿ ಕುಳಿತುಕೊಳ್ಳಲು ಆಗುವುದಿಲ್ಲ ಎಂಬುದು ತಿಳಿದುಬಂತು. ಅಲ್ಲದೆ ಆತ ಸಾಮಾಜಿಕ ಪ್ರತ್ಯೇಕತೆಯನ್ನು ಬಯಸುವ ಹುಡುಗನಾಗಿದ್ದು, ಪೀಡನೆಗೆ ಗುರಿಯಾಗುವ ಸಾಧ್ಯತೆ ಇತ್ತು. ಆತನ ತರಗತಿಯ ಮಟ್ಟಕ್ಕೆ ಆತನು ಬೆಳೆಯುವುದಕ್ಕಾಗಿ ಹಾಗೂ ಬರವಣಿಗೆ ಮತ್ತು ಸಂಖ್ಯಾ ಜ್ಞಾನದಲ್ಲಿ ಸುಧಾರಣೆ ಸಾಧಿಸುವುದಕ್ಕಾಗಿ ಶಿಕ್ಷಕಿಯು ಪ್ರತಿ ದಿನವೂ ಸಾಜನ್ಗೆ ಮನೆಗೆಲಸವನ್ನು ನೀಡುತ್ತಿದ್ದರು. ಇದು ಮನೆಯಲ್ಲಿ ಒತ್ತಡದ ಮಟ್ಟವನ್ನು ಹೆಚ್ಚಿಸಿತು. ಸಾಜನ್ ಚಿತ್ರ ಬಿಡಿಸುವುದನ್ನು, ಬಿಲ್ಡಿಂಗ್ ಬ್ಲಾಕ್‌ಗಳ ಜೊತೆ ಆಟವಾಡುವುದನ್ನು, ಅದ್ಭುತ ಕಟ್ಟಡ ವಿನ್ಯಾಸಗಳನ್ನು ರಚಿಸುವುದನ್ನು ಹಾಗೂ ಕ್ಲೈಂಬಿಂಗ್ ಫ್ರೇಮ್ ಮತ್ತು ಸ್ಲೈಡ್‌ನಲ್ಲಿ ಆಟವಾಡುವುದನ್ನು ಹೆಚ್ಚು ಇಷ್ಟಪಡುತ್ತಾನೆ. ಆದರೆ, ಶಾಲಾ ಮುಖ್ಯಸ್ಥರು ಎಲ್ಲರಿಗೂ ಒಂದೇ ಪಠ್ಯಕ್ರಮವನ್ನು ಅನುಸರಿಸಲು ಪ್ರಾರಂಭಿಸಿದರೆ, ಇಂತಹ ಚಟುವಟಿಕೆಗಳನ್ನು ಮಾಡಿ ಕಲಿಯುವ ಅವಕಾಶವು ಕುಗ್ಗುತ್ತದೆ.

ಸಮನ್ವಯ ಶಿಕ್ಷಣದ ಹಿನ್ನೆಲೆಯಿಂದ, ಸಾಜನ್ ಮತ್ತು ಅವನಂತಹ ಇತರ ಮಕ್ಕಳು ತರಗತಿ ಕೋಣೆಯ ವೈವಿಧ್ಯತೆಗೆ (ಶಿಕ್ಷಕರು ಇದಕ್ಕೆ ಸೂಕ್ತ ಸಿದ್ಧತೆಯನ್ನು ಮಾಡಿಕೊಂಡಿರುವುದಿಲ್ಲ) ಇನ್ನೊಂದು ಆಯಾಮವನ್ನು ಒದಗಿಸುತ್ತಾರೆ. ಆರಂಭಿಕ ಪತ್ತೆ ಹಚ್ಚುವಿಕೆಯು ಶಾಲಾ ವ್ಯವಸ್ಥೆಯ ಅಡಿಯಲ್ಲಿ ಗುರುತಿಸಲಾದ ಅಂಗವೆನಿಸುತ್ತದೆ. ಏಕೆಂದರೆ ಬಾಲ್ಯದ ವೈಕಲ್ಯಗಳು ಆರಂಭಿಕ ವರ್ಷಗಳಲ್ಲಿ ಪತ್ತೆಯಾಗದೆ ಹೋಗುತ್ತವೆ. ಹೀಗಾಗಿ ಇದೊಂದು ಪ್ರಗತಿಶೀಲ ಕ್ರಮವೆನಿಸುತ್ತದೆ. ಸಾಜನ್ ಮತ್ತು ಅವನಂತಹ ಇತರ ವಿದ್ಯಾರ್ಥಿಗಳು ಆರಂಭಿಕ ಹಸ್ತಕ್ಷೇಪ ಮತ್ತು ಸಾಕಷ್ಟು ಉತ್ತೇಜನದಿಂದ ಪ್ರಯೋಜನವನ್ನು ಗಳಿಸುತ್ತಾರೆ. ಬೇಸರದ ವಿಷಯವೇನೆಂದರೆ, ತಾವು ಎದುರಿಸುವ ಸಮಸ್ಯೆಗಳ ಕಾರಣ ಅವರು ಶಾಲೆ ಬಿಟ್ಟ ವಿದ್ಯಾರ್ಥಿಗಳಾಗಿ ಗುರುತಿಸಲ್ಪಡುತ್ತಾರೆ. ಹೊಸ ಕಾಯಿದೆಯಲ್ಲಿ, ನೋಡಿಕೊಳ್ಳುವವರು, ಸಾರಿಗೆ ವ್ಯವಸ್ಥೆ ಇತ್ಯಾದಿಗಳ ಮೂಲ ಅಗತ್ಯತೆಗಳು ಹಾಗೂ ದೈಹಿಕ ಮತ್ತು ಸಂವಹನ ಮಿತಿಗಳನ್ನು ಸಮಂಜಸ ಸೌಕರ್ಯವಾಗಿ ಪರಿಗಣಿಸಲಾಗುತ್ತದೆ. ಪಠ್ಯಕ್ರಮದ ಹೊಂದಿಕೆಯೊಂದಿಗೆ, ತಾನು ಇಷ್ಟಪಡುವ ಚಟುವಟಿಕೆಗಳನ್ನು ಬಳಸಿ ತಮ್ಮ ಗಮನದ ವ್ಯಾಪ್ತಿಯನ್ನು ಅಭಿವೃದ್ಧಿಪಡಿಸಲು (ತರಗತಿಯಲ್ಲಿರುವ ಇತರರಂತೆಯೇ ಅದೇ ಕಲಿಕಾ ಫಲಿತಾಂಶಗಳಿಗಾಗಿ ಕೆಲಸ ಮಾಡುತ್ತ) ಕಲಿಯಬಹುದು. ಆತನಿಗೆ ಸಹಾಯ ಮಾಡುವುದಕ್ಕಾಗಿ ಬೋಧನಾ ಸಹಾಯಕರ ಮೇಲ್ವಿಚಾರಣೆಯು ಆತನಿಗೆ ಅಗತ್ಯವೆನಿಸಬಹುದು. ಉದಾಹರಣೆಗೆ, ಸ್ನೇಹಿತರನ್ನು ಪಡೆಯಲು ಅಥವಾ ಸಕಾಲದಲ್ಲಿ ಸಮಸ್ಯೆಯನ್ನು ಬಿಡಿಸಲು. ಇವೆಲ್ಲವುಗಳನ್ನು ಕಾಯಿದೆಯ 17 ಮತ್ತು 18ನೇ ಸೆಕ್ಷನ್ನಗಳಲ್ಲಿ 'ಶಿಕ್ಷಣ ಸಂಸ್ಥೆಗಳ ಕರ್ತವ್ಯಗಳು' ಮತ್ತು 'ಸಮನ್ವಯ ಶಿಕ್ಷಣವನ್ನು ಉತ್ತೇಜಿಸಲು ತೆಗೆದುಕೊಳ್ಳಬೇಕಾದ ನಿರ್ದಿಷ್ಟ ಕ್ರಮಗಳು' ಅಡಿಯಲ್ಲಿ ಮಧ್ಯಸ್ಥಿಕೆಗಳಾಗಿ ಪಟ್ಟಿ ಮಾಡಲಾಗಿದೆ.

ಆರ್.ಪಿ.ಡಬ್ಲ್ಯೂ.ಡಿ. ಕಾಯಿದೆಯು 'ಅಡೆತಡೆಗಳು' ಎಂಬ ಕಲ್ಪನೆಯನ್ನು ವಿಶೇಷಚೇತನದ ವ್ಯಾಖ್ಯಾನದಲ್ಲಿ ಹೆಚ್ಚುವರಿಯಾಗಿ ಪರಿಚಯಿಸಿದೆ. ಯು.ಎನ್.ಸಿ.ಆರ್.ಪಿ.ಡಿ. ಒತ್ತು ನೀಡಿದಂತೆ, ಅಂಗ ವೈಕಲ್ಯತೆಯ ಸಮಸ್ಯೆಯು ವ್ಯಕ್ತಿಯಲ್ಲಿ ಇರುವುದಿಲ್ಲ, ಬದಲಾಗಿ ಪರಿಸರವು ವಿಧಿಸಿರುವ 'ಅಡೆತಡೆಗಳಲ್ಲಿ' ಇರುತ್ತದೆ. ಸಾಜನ್‌ನ ಪ್ರಕರಣದಲ್ಲಿ, ದೀರ್ಘಕಾಲ ಕುಳಿತುಕೊಳ್ಳಬೇಕಾದ ನಿರೀಕ್ಷೆಯನ್ನು ಮಾರ್ಪಡಿಸಬೇಕು. ಏಕೆಂದರೆ, ಆತನು ಇದಕ್ಕೆ ನರಶಾಸ್ತ್ರೀಯವಾಗಿ ಸಿದ್ಧನಾಗಿಲ್ಲ. ಆತನ ಶಿಕ್ಷಕರು ಆತನಿಗೆ ಕಲಿಕೆಯಲ್ಲಿ ಆಟವನ್ನು ಒಳಗೊಂಡಿರುವ, ಕಡಿಮೆ ಅವಧಿಯ ಚಟುವಟಿಕೆಗಳನ್ನು ನೀಡಬೇಕು ಹಾಗೂ ಆತನ ಸಾಧನೆಯನ್ನು ಮುಕ್ತವಾಗಿ ಪ್ರಶಂಸಿಸಬೇಕು. ತರಗತಿಯಲ್ಲಿ ಪಾಲ್ಗೊಳ್ಳುವಿಕೆಯನ್ನು ಸುಧಾರಿಸುವುದಕ್ಕಾಗಿ, ಪ್ರತ್ಯೇಕಿಸುವ ಮತ್ತು ಹೊರಗಿಡುವ ಪರಿಸರೀಯ, ಮನೋಭಾವಕ್ಕೆ ಸಂಬಂಧಿಸಿದ ಮತ್ತು ಸಂವಹನಕ್ಕೆ ಸಂಬಂಧಿಸಿದ ಅಂಶಗಳನ್ನು ಅವರು ತೊಲಗಿಸಬೇಕು ಹಾಗೂ ಭರವಸೆ ಮತ್ತು ಆಶಾವಾದಕ್ಕೆ ಒತ್ತು ನೀಡಬೇಕು.

ಹೀಗಾಗಿ ಆಡಳಿತ ಮಂಡಳಿಯವರು ಮತ್ತು ಶಿಕ್ಷಕರು 'ಸಮಂಜಸ ಹೊಂದಾಣಿಕೆಗಳನ್ನು' ವ್ಯಕ್ತಪಡಿಸಬಹುದು. ಅವೆಂದರೆ, ಅವರ ಸಮನ್ವಯ ಶಾಲಾ ಅಭಿವೃದ್ಧಿ ಯೋಜನೆಯಲ್ಲಿ, ಪಠ್ಯಕ್ರಮ ಅಥವಾ ಶಾಲಾ ವಾತಾವರಣದಲ್ಲಿ ಹೊಂದಾಣಿಕೆಗಳು ಅಥವಾ ಮಾರ್ಪಾಡುಗಳನ್ನು ಮಾಡುವುದು. ಇದು ಸಾಜನ್‌ನಂತಹ ಮಕ್ಕಳ ಒಳಗೊಳ್ಳುವಿಕೆಗೆ ಪೂರ್ವನಿದರ್ಶನವನ್ನು ಒದಗಿಸುತ್ತದೆ. ಈ ಕಾಯಿದೆಯ ಚೌಕಟ್ಟಿನೊಳಗೆ, ಸಮನ್ವಯ ಶಾಲಾಭಿವೃದ್ಧಿಗಾಗಿ 'ಸಮಂಜಸ ಹೊಂದಾಣಿಕೆಗೆ ಕೆಲವೊಂದು ಉದಾಹರಣೆಗಳು:

- ಅಧಿಕ ನೆರವಿನ ಅಗತ್ಯತೆಗಳು ಮತ್ತು ನೋಡಿಕೊಳ್ಳುವವರ ಅಗತ್ಯವಿರುವ ಮಗುವಿಗೆ ಸಾರಿಗೆ ವ್ಯವಸ್ಥೆ
- ಸುಲಭಗಮ್ಯ ಕಟ್ಟಡಗಳು, ಕ್ಯಾಂಪಸ್‌ಗಳು, ಶೌಚಾಲಯಗಳು ಮತ್ತು ಇತರ ಸೌಲಭ್ಯಗಳು
- ಕಲಿಕೆಯಲ್ಲಿ ಅಸಮರ್ಥತೆ ಇರುವ ಮಕ್ಕಳಿಗೆ ಶಿಕ್ಷಣಶಾಸ್ತ್ರೀಯ ನೆರವು
- ಶೈಕ್ಷಣಿಕ ಮತ್ತು ಸಾಮಾಜಿಕ ಬೆಳವಣಿಗೆಯನ್ನು ಗರಿಷ್ಠಗೊಳಿಸುವುದಕ್ಕಾಗಿ ವೈಯಕ್ತಿಕ ನೆರವು
- ಮಾರ್ಪಡಿಸಿದ ಪಠ್ಯಪುಸ್ತಕಗಳು: ಉದಾಹರಣೆಗೆ, ಬರ್ಖಾ ಸೀರೀಸ್, ಇದು ಎನ್.ಸಿ.ಇ.ಆರ್.ಟಿ. ಪ್ರಕಟಿಸಿದ ಪೂರಕ ಶ್ರೇಣೀಕೃತ ಓದುಗ ಸೇವೆಯಾಗಿದೆ
- ಮಾತು ಮತ್ತು ಓದಿನ ದೌರ್ಬಲ್ಯ ಇರುವ ಮಕ್ಕಳಿಗೆ ಬದಲಿ ಮತ್ತು ವರ್ಧಿಸುವ ಸಂವಹನ ವ್ಯವಸ್ಥೆಗಳು

- ಪರೀಕ್ಷಾ ವ್ಯವಸ್ಥೆಯಲ್ಲಿ ಮಾರ್ಪಾಡು: ಹೆಚ್ಚುವರಿ ಸಮಯ, ಕಂಪ್ಯೂಟರ್‌ಗಳ ಬಳಕೆ, ಲಿಪಿಕಾರರು

ಆರ್.ಪಿ.ಡಬ್ಲ್ಯೂ.ಡಿ. ಕಾಯಿದೆಯ ಅತ್ಯಂತ ಪ್ರಗತಿಶೀಲ ಗುಣಲಕ್ಷಣವೆಂದರೆ, ಯು.ಎನ್.ಸಿ.ಆರ್.ಪಿ.ಡಿ. ಪ್ರವರ್ತಿಸಿದ 'ಸಾರ್ವತ್ರಿಕ ವಿನ್ಯಾಸ' ಪರಿಕಲ್ಪನೆ. 'ಸಾರ್ವತ್ರಿಕ ವಿನ್ಯಾಸ ಎಂದರೆ ಹೊಂದಾಣಿಕೆ ಅಥವಾ ವಿಶೇಷ ವಿನ್ಯಾಸವಿಲ್ಲದೆ ಆದಷ್ಟು ಮಟ್ಟಿಗೆ ಎಲ್ಲಾ ಜನರು ಬಳಸಬಹುದಾದ ಉತ್ಪನ್ನಗಳು ಮತ್ತು ಪರಿಸರಗಳ ವಿನ್ಯಾಸವಾಗಿದೆ' (ಮೇಸ್, 1988). ಶಾಲೆಗಳಲ್ಲಿ ಇದು, ವಿಸ್ತೃತ ಕಲಿಕಾ ಹಿನ್ನೆಲೆ ಮತ್ತು ಅಗತ್ಯತೆಗಳನ್ನು ಹೊಂದಿರುವ ಎಲ್ಲಾ ವಿದ್ಯಾರ್ಥಿಗಳನ್ನು ಒಳಗೊಳ್ಳುವ ನಮ್ಮ ಕಲಿಕಾ ಪರಿಸರಗಳನ್ನು ಸೃಷ್ಟಿಸಲು ಕಾರಣವೆನಿಸುತ್ತದೆ. ಇದೇ ರೀತಿಯ ಬೋಧನಾ-ಕಲಿಕಾ ವಿಧಾನಗಳು ಸಾಜನ್ ಮತ್ತು ಆ ತರಗತಿಯ ಇತರ ವಿದ್ಯಾರ್ಥಿಗಳಿಗೆ ದೊರೆತರೆ ಆತನು ಆನಂದಮಯ ಕಲಿಕಾ ವಾತಾವರಣದಲ್ಲಿ ಬೆಳೆಯಲು ಸಾಧ್ಯವಾಗುತ್ತದೆ. ಹೀಗಾಗಿ, ತನ್ನ ತರಗತಿಯಲ್ಲಿ ಬೇಕಾಗುವ ವೈವಿಧ್ಯತೆಯ ಗುಣಲಕ್ಷಣವನ್ನು ಅರಿತುಕೊಳ್ಳುವ ಜವಾಬ್ದಾರಿಯು ಪ್ರತಿ ಶಿಕ್ಷಕನಿಗೆ ಇದೆ. ಶಿಕ್ಷಕರು ತಾವಾಗಿಯೇ ಪರ್ಯಾಲೋಚನೆ ಮಾಡಿದರೆ ಇದು ಪೋಷಣೆಯನ್ನು ಉತ್ತೇಜಿಸುವ ತರಗತಿ ಕೋಣೆಯನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಲಿದೆ.

ಎಲ್ಲ ವಿದ್ಯಾರ್ಥಿಗಳಿಗೆ ಪ್ರಯೋಜನಕಾರಿ ಎನಿಸಬಹುದಾದ, ಸಾರ್ವತ್ರಿಕ ವಿನ್ಯಾಸದ ತರಗತಿಕೋಣೆಯ ಮಧ್ಯಸ್ಥಿಕೆಯ ಕೆಲವೊಂದು ಉದಾಹರಣೆಗಳು:

- **ಲಭ್ಯತೆ:** ರ್‍ಯಾಂಪ್‌ಗಳು (ಇಳಿಜಾರು) ಆಸನ ವ್ಯವಸ್ಥೆ, ಸಾರಿಗೆ ವ್ಯವಸ್ಥೆ, ಎಲೆಕ್ಟ್ರಾನಿಕ್ ಪುಸ್ತಕಗಳು
- **ಪಾಲ್ಗೊಳ್ಳುವಿಕೆ:** ದೃಶ್ಯಸಹಿತ ವೇಳಾಪಟ್ಟಿಗಳು, ಸಚಿತ್ರ ಶಬ್ದಕೋಶ, ಸಂಗಾತಿಗಳೊಂದಿಗೆ ಕೆಲಸ ಮಾಡುವುದು, ಪ್ರಾಜೆಕ್ಟ್ ಕೆಲಸ, ಕೆಲಸದ ಅನುಭವ, ಹೊರಾಂಗಣ ಕ್ರೀಡೆ, ದೃಶ್ಯ ಮತ್ತು ಪ್ರದರ್ಶನ ಕಲೆಗಳು
- **ಅಭಿವ್ಯಕ್ತಿಯ ವಿಧಾನಗಳು:** ಲಿಖಿತ, ಮೌಖಿಕ ಪ್ರತಿಕ್ರಿಯೆಗಳು, ಕಲೆ, ನಾಟಕ, ಮಲ್ಟಿಮೀಡಿಯಾ ಪ್ರಸ್ತುತಿಗಳು

### ಆರ್.ಟಿ.ಇ. ಮತ್ತು ಆರ್.ಪಿ.ಡಬ್ಲ್ಯೂ.ಡಿ. ಕಾಯಿದೆಗಳು ಹೇಗೆ ಒಟ್ಟಿಗೆ ಕೆಲಸ ಮಾಡುತ್ತವೆ?

ಈ ವಿಭಾಗವು, ಎರಡು ವಿಭಿನ್ನ ದೃಷ್ಟಿಕೋನಗಳಿಂದ ಆರ್.ಟಿ.ಇ ಕಾಯಿದೆ ಮತ್ತು ಆರ್.ಪಿ.ಡಬ್ಲ್ಯೂ.ಡಿ ಕಾಯಿದೆಯ ನಡುವಿನ ಕೊಂಡಿಗಳನ್ನು ಶೋಧಿಸುತ್ತದೆ. ಮೊದಲನೆಯದಾಗಿ, ಪೂರ್ವ ಶಿಕ್ಷಣ ಅಭಿಯಾನದಂತಹ (ಎಸ್.ಎಸ್.ಎ) ರಾಷ್ಟ್ರೀಯ ಕಾರ್ಯಕ್ರಮಗಳ ಮೇಲೆ ಪ್ರಭಾವ ಬೀರುವ ಹಳೆಯ ಕಲ್ಯಾಣ ಮನೋಭಾವದ ಕುರಿತು ಕಾಳಜಿ ಹೊಂದಿದ್ದ ವಿಶೇಷಚೇತನ ಹಕ್ಕುಗಳ ಪ್ರತಿಪಾದಕರ ಸಮಗ್ರ ದೃಷ್ಟಿಕೋನದ ಮೂಲಕ. ಎರಡನೆಯದಾಗಿ, ಕನಿಕಾಳ (ಕೆಳಗೆ) ವಿಷಯ ಅಧ್ಯಯನದ ಮೂಲಕ, ಸಮನ್ವಯದ ಪ್ರಾಯೋಗಿಕ ಅಂಶಗಳನ್ನು ಪಟ್ಟಿ ಮಾಡುವ ಮೂಲಕ.

### ವಿಶೇಷಚೇತನ ಮಕ್ಕಳ ಶಿಕ್ಷಣ: ಕಲ್ಯಾಣದ ಐತಿಹಾಸಿಕ ರಕ್ಷಣೆ

ಎರಡು ಸಾವಿರದ ಒಂದರಲ್ಲಿ ಶಿಕ್ಷಣವನ್ನು ಎಲ್ಲರ ಮೂಲಭೂತ ಹಕ್ಕಾಗಿ ಖಾತರಿಪಡಿಸುವುದಕ್ಕಾಗಿ ಸಂವಿಧಾನಕ್ಕೆ ತಿದ್ದುಪಡಿ ತಂದ ಸಂದರ್ಭದಲ್ಲಿಯೂ, ವಿಶೇಷಚೇತನ ಮಕ್ಕಳ ಶಿಕ್ಷಣವನ್ನು ಸರ್ಕಾರ ಮಾಡಬೇಕಾದ ಕಲ್ಯಾಣದ ವಿಷಯವೆಂದೇ ಗ್ರಹಿಸಲಾಗಿತ್ತು. ಕಲ್ಯಾಣದ ಈ ಸಂಪೂರ್ಣ ರಕ್ಷಣೆಯು, ಎಲ್ಲರಿಗೂ ಶಿಕ್ಷಣ ಅಭಿಯಾನದ ಮುಂಚೂಣಿ ಕಾರ್ಯಕ್ರಮವೆನಿಸಿರುವ ಎಸ್.ಎಸ್.ಎ. ಅಡಿಯಲ್ಲಿಯೂ ಪ್ರತ್ಯೇಕಿಸಲಾದ ಸೇವೆಗಳ ಸಂರಕ್ಷಣೆಗೆ ಕಾರಣವೆನಿಸಿದೆ. ಅಧಿಕ ನೆರವಿನ ಅಗತ್ಯವಿರುವ ಮಕ್ಕಳು ಎಸ್.ಎಸ್.ಎ. ಅಡಿಯಲ್ಲಿ ಶಾಲೆಯಲ್ಲಿ ದಾಖಲಾತಿ ಪಡೆಯಬಹುದು, ಆದರೆ ಅವರು ಮನೆ ಆಧರಿತ ಕಾರ್ಯಕ್ರಮಗಳನ್ನು ಪಡೆಯುವಲ್ಲಿ ಪರ್ಯವಸಾನಗೊಳ್ಳಬಹುದು ಎಂದು ವಿಶೇಷಚೇತನ ಹಕ್ಕು ಕಾರ್ಯಕರ್ತರು ಕಳವಳ ವ್ಯಕ್ತಪಡಿಸಿದ್ದಾರೆ. ಇದು ಆರ್.ಟಿ.ಇ. ಕಾಯಿದೆಯ ಅಂತಸ್ಸತ್ವಕ್ಕೆ ವಿರುದ್ಧವಾಗಿದೆ.

ದಿನನಿತ್ಯದ ಚಟುವಟಿಕೆಗಳಿಗೆ ಅಧಿಕ ನೆರವಿನ ಅಗತ್ಯವಿರುವ ಮಾನದಂಡದ ವಿಶೇಷಚೇತನ (ಶೇಕಡ 40ರಷ್ಟು ವಿಶೇಷಚೇತನ) ಇರುವ ಮಕ್ಕಳ ವಿಷಯದಲ್ಲಿ 'ಸಾಮರ್ಥ್ಯಗಳ ವಿಕಸನ'ದ ಪರಿಕಲ್ಪನೆಯು ಸಹ ಇದೇ ರೀತಿಯ ಸಮಸ್ಯೆಗೆ ತುತ್ತಾಗುತ್ತದೆ. ಸಾಮಾಜಿಕ ಅಡೆ-ತಡೆಗಳನ್ನು ಕಡೆಗಣಿಸಲಾಗಿದೆಯೇ ಎಂದು ವಿಶೇಷಚೇತನ ಹಕ್ಕು ಕಾರ್ಯಕರ್ತರು ಕೇಳುತ್ತಿದ್ದಾರೆ. 'ವ್ಯಕ್ತಿಯ ದುರ್ಬಲತೆಯ ಕುರಿತು ನಾವು ಹೊಂದಿರುವ ಅರಿವನ್ನು ಆಧರಿಸಿ ಒಂದು ನಿರ್ದಿಷ್ಟ ಮಟ್ಟದಲ್ಲಿ ಜನರನ್ನು ನಾವು ವಿಂಗಡಿಸುತ್ತೇವೆ. ಇದು ವ್ಯಕ್ತಿಯ ಸಾಮರ್ಥ್ಯದ ವಿಕಸನವನ್ನು ಗೌರವಿಸುವುದಕ್ಕೆ ಕಾರಣವಾಗುವುದಿಲ್ಲ. ಏಕೆಂದರೆ, ನೀಡಲಾದ ಪರಿಸರದಲ್ಲಿ ವ್ಯಕ್ತಿಯ ಬೆಳವಣಿಗೆಯನ್ನು ನಿರ್ಬಂಧಿಸುವ ಅಂಶಗಳ ಮೇಲೆ ನಾವು ಗಮನ ನೀಡುವುದಿಲ್ಲ' ಎಂದು ಈಕ್ವಲ್ಸ್: ಸೆಂಟರ್ ಫಾರ್ ಪ್ರೊಮೋಷನ್ ಆಫ್ ಸೋಷಿಯಲ್ ಜಸ್ಟಿಸ್‌ನ ಪ್ರಾಜೆಕ್ಟ್‌ಗಳ ಸಂಯೋಜಕಿ ಹಾಗೂ ವಿಶೇಷಚೇತನ ಹಕ್ಕುಗಳ ಕಾರ್ಯಕರ್ತೆ ಮೀನಾಕ್ಷಿ ಬಾಲಸುಬ್ರಹ್ಮಣ್ಯಂ ಹೇಳುತ್ತಾರೆ.

ವೈದ್ಯರು ನೀಡುವ ವಿಶೇಷಚೇತನ ಪ್ರಮಾಣಪತ್ರಗಳು ಶಾಲೆಗಳಲ್ಲಿ ಪ್ರವೇಶ ಪಡೆಯುವ ವಿಚಾರದಲ್ಲಿ ಅಪ್ರಸ್ತುತವೆನಿಸುತ್ತವೆ: ಶೈಕ್ಷಣಿಕ ಮೌಲ್ಯಮಾಪನಗಳಿಗೆ ಒತ್ತು ನೀಡಬೇಕು. ವಿಶೇಷಚೇತನ ಸಂಪನ್ಮೂಲ ಕೇಂದ್ರವಾಗಿರುವ 'ವಿದ್ಯಾ ಸಾಗರ್'ನ ಉಪನಿರ್ದೇಶಕರಾದ ದೀಪ್ತಿ ಭಾಟಿಯಾ ಅವರ ಪ್ರಕಾರ, 'ಮಗುವನ್ನು ಪರಿಸರಕ್ಕೆ ತಕ್ಕುದಾಗಿ ಸಿದ್ಧಪಡಿಸುವ ಬದಲಿಗೆ ಪರಿಸರವನ್ನೇ ಮಗುವಿಗೆ ಬೇಕಾದಂತೆ ಸಿದ್ಧಪಡಿಸುವುದಕ್ಕಾಗಿ ಪ್ರವೇಶದ ಸಂದರ್ಭದಲ್ಲಿ ಮೌಲ್ಯಮಾಪನಗಳನ್ನು ನಡೆಸಬೇಕು.' ಪರೀಕ್ಷಾ ವ್ಯವಸ್ಥೆಯಲ್ಲೂ ವಿಕಸನ ಹೊಂದಬೇಕಾದ ಅಗತ್ಯವಿದೆ ಎಂದು ಆಕೆ ಹೇಳುತ್ತಾರೆ. ಆರ್.ಟಿ.ಇ.ಯು ಮಗು ಕೇಂದ್ರಿತ ಮತ್ತು ಚಟುವಟಿಕೆ ಆಧರಿತ ಪಠ್ಯಕ್ರಮವನ್ನು ಆಧರಿಸಿದ ಕಲಿಕಾ ಗುಣಮಟ್ಟವನ್ನು ಉಲ್ಲೇಖಿಸುತ್ತದೆ ಹಾಗೂ ಮೌಲ್ಯಮಾಪನದ ವಿಧಾನಗಳು ಬದಲಾವಣೆಯನ್ನು ಪ್ರತಿಫಲಿಸಬೇಕು ಎಂದು ಹೇಳುತ್ತದೆ.

### ಸಂಪೂರ್ಣ ಶಾಲಾ ವಿಧಾನ

ಕನಿಕಾಳ ಕಥೆಯು, ಅಧಿಕ ನೆರವಿನ ಅಗತ್ಯವಿರುವ ಪ್ರಮಾಣಿತ ವಿಶೇಷಚೇತನ ಮಗುವಿನ ಒಳಗೊಳ್ಳುವಿಕೆಯಲ್ಲಿ ಶಾಲೆಯು ವಹಿಸಬಹುದಾದ ಪಾತ್ರವನ್ನು ವಿವರಿಸುತ್ತದೆ. ಅವಧಿಗೆ ಮೊದಲೇ ಜನಿಸಿದ ಕನಿಕಾಳಲ್ಲಿ ಹುಟ್ಟುವಾಗಲೇ ಸೆರೆಬ್ರಲ್ ಪಾಲ್ಸಿ ಕಂಡು ಬಂದಿತು. ತೀವ್ರ ದೈಹಿಕ ಮತ್ತು ಮಾತಿನ ಥೆರಪಿಗಳ ಮೂಲಕ

ಆಕೆಯು ತನ್ನ ಬೆಳವಣಿಗೆಯ ಮೈಲುಗಲ್ಲನ್ನು (ಎರಡು ವರ್ಷಗಳ ವಿಳಂಬದೊಂದಿಗೆ) ಸಾಧಿಸಿದಳು. ಆರನೇ ವಯಸ್ಸಿನಲ್ಲಿ ಆಕೆಯನ್ನು ಪಕ್ಕದ ಶಾಲೆಯಲ್ಲಿ ಒಂದನೇ ತರಗತಿಗೆ ಸೇರಿಸಲಾಯಿತು. ಈಗ ಅವಳು ಮೂರನೇ ತರಗತಿಯಲ್ಲಿದ್ದಾಳೆ. ಬೋಧನಾ ಸಹಾಯಕರ ಬಳಕೆ, ಪಠ್ಯಕ್ರಮದ ಭಾರವನ್ನು ಇಳಿಸುವುದು, ಬರೆಯುವುದಕ್ಕಾಗಿ ಹೆಚ್ಚುವರಿ ಸಮಯವನ್ನು ನೀಡುವುದು ಇತ್ಯಾದಿ ಪಠ್ಯಕ್ರಮ ಹೊಂದಾಣಿಕೆಗಳು ತರಗತಿಯ ದಿನಚರಿಯ ಭಾಗವೆನಿಸಿದ್ದು ಈ ಶಾಲೆಯು ಪ್ರಗತಿಶೀಲ ಇತಿಹಾಸವನ್ನು ಹೊಂದಿದೆ. ಕನಿಕಾಳು ತನ್ನ ಎಲ್ಲಾ ಸಹಪಾಠಿಗಳೊಂದಿಗೆ ಕಲೆ, ನೃತ್ಯ ಮತ್ತು ನಾಟಕ ಇತ್ಯಾದಿ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಾಳೆ ಹಾಗೂ ಶಾಲೆಯಲ್ಲಿ ಯಶಸ್ಸನ್ನು ಸಾಧಿಸುವ ವಿದ್ಯಾರ್ಥಿನಿಯಾಗಿ ಆಕೆ ಗುರುತಿಸಿಕೊಂಡಿದ್ದಾಳೆ.

ಅಧಿಕ ನೆರವಿನ ಅಗತ್ಯವಿರುವ ಕನಿಕಾಳಂತಹ ಇನ್ನಷ್ಟು ವಿದ್ಯಾರ್ಥಿಗಳನ್ನು ಉತ್ತೇಜಿಸುವುದಕ್ಕಾಗಿ ಶಾಲೆಯು ವೈವಿಧ್ಯತೆಯನ್ನು ಬೆಂಬಲಿಸುವ ಸಹಯೋಗದ ಸಂಸ್ಕೃತಿಯನ್ನು ರೂಪಿಸಬೇಕು. ಸಮನ್ವಯ ಶಿಕ್ಷಣವನ್ನು ಉತ್ತೇಜಿಸುವುದಕ್ಕಾಗಿ ಕೆಲವೊಂದು ಕಲ್ಪನೆಗಳನ್ನು ಇಲ್ಲಿ ನೀಡಲಾಗಿದೆ:

- 'ಇಂಡೆಕ್ಸ್ ಫಾರ್ ಇನ್‌ಕ್ಲೂಷನ್'ನಂತಹ ಸಾಧನಗಳನ್ನು ಬಳಸುವ ಶಾಲೆಗಳನ್ನು ಮೌಲ್ಯಮಾಪನ ಮಾಡುವುದು
- ವಿಶೇಷಚೇತನ ವ್ಯಕ್ತಿಗಳೊಂದಿಗೆ ಒಡನಾಟ ರೂಪಿಸುವುದಕ್ಕಾಗಿ ಶಿಕ್ಷಕರು, ಆಡಳಿತ ಸಿಬ್ಬಂದಿ ಮತ್ತು ಶಾಲಾ ಸಮುದಾಯಕ್ಕೆ ಅವಕಾಶವನ್ನು ಸೃಷ್ಟಿಸುವುದು
- ಶಿಕ್ಷಕರು, ವಿಶೇಷ ಶಿಕ್ಷಕರು ಮತ್ತು ಬೋಧನಾ ಸಹಾಯಕರ ನಡುವೆ ಸಹಯೋಗ ರೂಪಿಸುವುದಕ್ಕಾಗಿ ಮಾರ್ಗಸೂಚಿಗಳನ್ನು ರೂಪಿಸುವುದು
- ಸಹಯೋಗದ ಪಂಗಡ ಕೆಲಸವನ್ನು ಉತ್ತೇಜಿಸುವುದಕ್ಕಾಗಿ ತರಬೇತಿ ಕಾರ್ಯಕ್ರಮಗಳನ್ನು ಅಭಿವೃದ್ಧಿಪಡಿಸುವುದು
- ಸಹಾಯಕ ತಂತ್ರಜ್ಞಾನ ಮತ್ತು ಸಂವಹನಕ್ಕಾಗಿ ಸಂಪನ್ಮೂಲಗಳನ್ನು ನೀಡುವುದು
- ಮುಖ್ಯವಾಹಿನಿಯ ಶಾಲೆಗಳಿಗೆ ನೆರವು ಒದಗಿಸುವುದಕ್ಕಾಗಿ ವಿಶೇಷಚೇತನ ಸಂಪನ್ಮೂಲ ಕೇಂದ್ರಗಳೊಂದಿಗೆ ಸಹಯೋಗ ಸಾಧಿಸುವುದು
- ಶಾಲಾ ಪರಿಸರದ ಸುಲಭ ಗಮ್ಯತೆಯ ಪರಿಶೋಧನೆಯನ್ನು ನಡೆಸುವುದು
- ವಿಭಿನ್ನ ಬೋಧನೆ, ಸಹಕಾರಿ ಕಲಿಕೆ, ಪಠ್ಯಕ್ರಮದ ಹೊಂದಾಣಿಕೆಗಳು ಇತ್ಯಾದಿಗಳಲ್ಲಿ ಶಿಕ್ಷಕರಿಗೆ ಸೇವೆಗೆ ಮೊದಲು ಮತ್ತು ಸೇವಾನಿರತ ಕಾರ್ಯಕ್ರಮಗಳ ಮೂಲಕ ತರಬೇತಿ ನೀಡುವುದು
- ಸಮನ್ವಯ ತರಗತಿ ಕೋಣೆಯಲ್ಲಿ ಸಹ-ಕಲಿಕೆಯನ್ನು ಉತ್ತೇಜಿಸುವುದು
- ಉತ್ತಮ ಅಭ್ಯಾಸಗಳ ಕುರಿತು ಚರ್ಚೆ ನಡೆಸಲು ನಿರಂತರವಾಗಿ ಸಭೆ ಸೇರುವುದಕ್ಕಾಗಿ ಶಿಕ್ಷಕರನ್ನು ಉತ್ತೇಜಿಸುವುದು
- ಪಠ್ಯಕ್ರಮಗಳು ಮತ್ತು ಮೌಲ್ಯಮಾಪನ ತಂತ್ರಗಳನ್ನು ಅಳವಡಿಸಿಕೊಳ್ಳುವುದು. ಎಲೆಕ್ಟ್ರಾನಿಕ್ ಪೋರ್ಟ್ ಫೋಲಿಯೋ ಬಳಸುವುದು
- ವಿಶೇಷಚೇತನ ಮಕ್ಕಳ ಪೋಷಕರನ್ನು ಒಳಗೊಳ್ಳುವುದು

**ತೀರ್ಮಾನ**

ಸಹಯೋಗವು ಸಮನ್ವಯ ಶಿಕ್ಷಣದ ಮೂಲೆಗಲ್ಲಾಗಿದೆ. ಇದೊಂದು ಪ್ರಕ್ರಿಯೆಯೇ ಹೊರತು, ಮಧ್ಯಸ್ಥಿಕೆಗಳ ಸರಣಿಯ ಅಂತಿಮ ಉತ್ಪನ್ನವಲ್ಲ. ಶಾಲಾ ಸಮುದಾಯದ ಒಳಗೆ ನಡೆಯುವ ಸಂವಾದ ಮತ್ತು ಸ್ವವಿಮರ್ಶೆಯು ಅನುಷ್ಠಾನ ಪ್ರಕ್ರಿಯೆಯ ಕುರಿತು ಉತ್ತಮ ಅರಿವನ್ನು ನೀಡುತ್ತದೆ. ವಿಶೇಷಚೇತನ ಮಕ್ಕಳು ಸಹ ಇತರ ಮಕ್ಕಳಂತೆಯೇ ಈ ಸಮಾಜದ ಸದಸ್ಯರೆನಿಸಬೇಕು. ಆದರೆ ದೃಷ್ಟಿಕೋನವ ಕುರಿತ ಅಸಮರ್ಪಕ ಸ್ವವಿಮರ್ಶೆ ಹಾಗೂ ಭಾಗೀದಾರಿಗಳಾಗಿರುವ ಶಿಕ್ಷಕರು (ಸಾಮಾನ್ಯ ಮತ್ತು ವಿಶೇಷತಜ್ಞ), ಪೋಷಕರು, ಮಕ್ಕಳು ಮತ್ತು ಆಡಳಿತ ಮಂಡಳಿಯವರ ನಡುವಿನ ಸಹಯೋಗಕ್ಕೆ ಸಾಕಷ್ಟು ಅವಕಾಶ ದೊರೆಯದೆ ಹೋದರೆ ವೈರುಧ್ಯಗಳು ಉಂಟಾಗುತ್ತವೆ. ಸಮನ್ವಯ ಶಿಕ್ಷಣದ ಪ್ರಗತಿಗೆ ಬದ್ಧತೆ ತೋರುವ ಸೂಕ್ಷ್ಮ ಸಂವೇದಿ ಸಿಬ್ಬಂದಿಯನ್ನು ಅಭಿವೃದ್ಧಿಪಡಿಸುವುದು, ಭಿನ್ನತೆಯಿಂದ ಕೂಡಿದ ಬೋಧನಾ ತಂತ್ರಗಳು, ಬದಲಿ ಸಂವಹನ ವಿಧಾನಗಳು, ಅಲ್ಲದೆ ಪೋಷಕರು, ಸಮುದಾಯ ಮತ್ತು ಆಡಳಿತ ಮಂಡಳಿಯ ಸಕ್ರಿಯ ಒಳಗೊಳ್ಳುವಿಕೆಗೆ ಸಹಾಯ ಮಾಡುವ ಹಾಗೂ ಪಾಲ್ಗೊಂಡು ತೊಡಗಿಸಿಕೊಳ್ಳುವ ಮೂಲಕ ನಡೆಯುವ ಗೌರವಯುತ ಸಂವಾದವು ಈ ನಿಟ್ಟಿನಲ್ಲಿ ನಿರ್ಣಾಯಕವೆನಿಸುತ್ತದೆ.

ಅನುವಾದಕರು: **ಮೆಲ್ವಿನ್ ಮೆಂಡೋನ್ಕಾ** | ಪರಿಶೀಲಕರು: **ಲತಾ ಕೆ ಸಿ**

**ಪರಾಮರ್ಶನೆಗಳು:**


1 ಬೂತ್, ಟಿ ಮತ್ತು ಏನೆಸ್ಕೊ, ಎಂ. ಇಂಡೆಕ್ಸ್ ಫಾರ್ ಇನ್‌ಕ್ಲೂಷನ್: ಡೆವೆಲಪಿಂಗ್ ಲರ್ನಿಂಗ್ ಅಂಡ್ ಪಾರ್ಟಿಸಿಪೇಶನ್ ಇನ್ ಸ್ಕೂಲ್ಸ್ (2002) (2002) http://www.eenet.org.uk/resources/docs/ Index%20English.pdf

2 ಕರಿಕ್ಯುಲಮ್ ಅಡಾಪ್ಟೇಶನ್ಸ್ ಫಾರ್ ಚಿಲ್ಡ್ರನ್ ವಿತ್ ಸ್ಪೆಷಲ್ ನೀಡ್ಸ್, ಕಾನ್‌ಫ್ಲುಯೆನ್ಸ್, ಫೆಬ್ರುವರಿ 2016, ಸಂ 18, ಪೂರ್ವ ಶಿಕ್ಷಣ ಅಭಿಯಾನ http://mhrd.gov.in/sites/upload_files/mhrd/files/document-reports/Confluence.pdf

3 ಡಂಕನ್, ಆರ್. ಯುನಿವರ್ಸಲ್ ಡಿಸೈನ್ http://universaldesign.ie/What-is-Universal-Design/Conference-Proceedings/Universal-Design-for-the-21st-Century-Irish-InternationalPerspectives/

4 ಗೊಹೇನ್, ಮಾನಶ್ ಪ್ರತಿಮ್, 'ಎನ್.ಸಿ.ಇ.ಆರ್.ಟಿ. ಬುಕ್ಸ್ ಟು ಮೇಕ್ ಕ್ಲಾಸ್‌ರೂಂ ಇನ್‌ಕ್ಲೂಸಿವ್', ದ ಟೈಮ್ಸ್ ಆಫ್ ಇಂಡಿಯಾ, ಏಪ್ರಿಲ್ 22, 2017 https://timesofindia.indiatimes.com/city/delhi/ncert-books-to-make-classroom-inclusive/articleshow/58305822.cms

5 ಐಕೆಡ, ಡಿ. http://www.ikedaquotes.org

6 ಇಂಕ್ಲೂಡಿಂಗ್ ಚಿಲ್ಡ್ರನ್ ವಿತ್ ಸ್ಪೆಷಲ್ ನೀಡ್ಸ್, ಪ್ರೈಮರಿ ಸ್ಟೇಜ್, ಎನ್.ಸಿ.ಇ.ಆರ್.ಟಿ., 2014 http://www.ncert.nic.in/pdf_files/SpecialNeeds.pdf

7 ಜುಲ್ಕಾ, ಎ, ಇಂಡೆಕ್ಸ್ ಫಾರ್ ಡೆವೆಲಪಿಂಗ್ ಇನ್‌ಕ್ಲೂಸಿವ್ ಸ್ಕೂಲ್ಸ್, ಎನ್.ಸಿ.ಇ.ಆರ್.ಟಿ. http://www.ncert.nic.in/departments/nie/degsn/pdf_files/INDEX%20FINAL%20FOR%20WEBSITE.pdf

8 ಕೆ.ಪಿ.ಎಂ.ಜಿ, ಅಸೆಸಿಂಗ್ ದಿ ಇಂಪಾಕ್ಟ್ ಆಫ್ ದ ರೈಟ್ ಟು ಎಜುಕೇಶನ್ ಆಕ್ಟ್, ಮಾರ್ಚ್, 2016 https://assets.kpmg.com/content/dam/kpmg/pdf/2016/03/Assessingthe-impact-of-Right-to-Education-Act.pdf

9 ಲರ್ನಿಂಗ್ ಇಂಡಿಕೇಟರ್ಸ್ ಅಂಡ್ ಲರ್ನಿಂಗ್ ಔಟ್‌ಕಮ್ಸ್ ಅಟ್ ದಿ ಎಲಿಮೆಂಟರಿ ಸ್ಟೇಜ್, ಎನ್.ಸಿ.ಇ.ಆರ್.ಟಿ. 2014. http://www.dsek.nic.in/Misc/learningoutcome.pdf

10 ಮಹಮ್ಮದ್ ಇಮ್ರಾನುಲ್ಲ ಎಸ್. 'ಅಡ್ವಾಂಟೇಜಸ್ ಅಂಡ್ ಡಿಸ್ ಅಡ್ವಾಂಟೇಜಸ್ ಆಫ್ ಆರ್.ಟಿ.ಇ ಆಕ್ಟ್', ದಿ ಹಿಂದು, 21 ಮೇ 2013 http://www.thehindu.com/news/cities/Madurai/advantages-and-disadvantages-of-rte-act/article4735501.ece

11 ನಾಯ್ಡು, ಎ, ಕೊಲ್ಯಾಬೊರೇಶನ್ ಇನ್ ದಿ ಎರಾ ಆಫ್ ಇಂಕ್ಲೂಷನ್, ಚಾಪ್ಟರ್ ಆನ್ ರಿಫಾರ್ಮ್, ಇಂಕ್ಲೂಷನ್ ಅಂಡ್ ಟೀಚರ್ ಎಜುಕೇಶನ್, ಸಂ. ಫ಼ೊರ್ಲಿನ್ ಸಿ., ಮಿಂಗ್-ಗೊನ್ ಜೆ.ಎಲ್., ರೌಟ್ಲೆಜ್, 2008.

12 ನಾಯ್ಡು, ಎ, 'ಕೊಲಾಬೊರೇಶನ್ ಅಂಡ್ ಡೈಲಾಗ್: ದಿ ಎಸ್ಸೆನ್ಸ್ ಆಫ್ ಆನ್ ಇನ್‌ಕ್ಲೂಸಿವ್ ಪ್ರಾಕ್ಟಿಸ್', 'ಇನ್‌ಕ್ಲೂಷನ್ ಇನ್ ಎಜುಕೇಶನ್: ದಿ ಇಂಪ್ಲಿಮೆಂಟೇಶನ್ ಆಫ್ ಆರ್ಟಿಕಲ್ 24 ಆಫ್ ದಿ ಯುನೈಟೆಡ್ ನೇಶನ್ಸ್ ಕನ್‌ವೆನ್ಶನ್ ಆನ್ ದ ರೈಟ್ಸ್ ಆಫ್ ಪರ್ಸನ್ಸ್ ವಿತ್ ಡಿಸೆಬಿಲಿಟೀಸ್, ಹಾಂಕಾಂಗ್ ವಿಶ್ವವಿದ್ಯಾಲಯ, 2009 ಇಲ್ಲಿ ನಡೆದ ಸಮ್ಮೇಳನದಲ್ಲಿ ಮಂಡಿಸಿದ ಪ್ರಬಂಧ

13 ರೈಟ್ ಆಫ್ ಚಿಲ್ಡ್ರನ್ ಟು ಫ್ರೀ ಅಂಡ್ ಕಂಪಲ್ಸರಿ ಎಜುಕೇಶನ್ ಆಕ್ಟ್, http://www.advocatekhoj.com/library/bareacts/rightofchildrentofree/index.php?Title=Right%20of%20Children%20to%20Free%20and%20Compulsory%20Education%20Act,%202009

14 ಸಿಂಘಲ್, ಎನ್, ಎಜುಕೇಶನ್ ಆಫ್ ಚಿಲ್ಡ್ರನ್ ವಿತ್ ಡಿಸೇಬಿಲಿಟೀಸ್ ಇನ್ ಇಂಡಿಯಾ ಅಂಡ್ ಪಾಕಿಸ್ತಾನ್: ಆನ್ ಅನಾಲಿಸಿಸ್ ಆಫ್ ಡೆವೆಲಪ್‌ಮೆಂಟ್ಸ್ ಸಿನ್ಸ್ 2000 (2015) http://unesdoc.unesco. org/images/0023/002324/232424e.pdf

15 ಶರ್ಮ, ಎಸ್, 'ಎನ್.ಸಿ.ಇ.ಆರ್.ಟಿ. ಬ್ರಿಂಗ್ಸ್ ಔಟ್ ಲರ್ನಿಂಗ್ ಇಂಡಿಕೇಟರ್ಸ್ ಫಾರ್ ಕ್ಲಾಸಸ್ 1 ಟು VIII', ದಿ ಇಂಡಿಯನ್ ಎಕ್ಸ್‌ಪ್ರೆಸ್, ಜುಲೈ 28, 2015 http://indianexpress.com/article/cities/delhi/ncert-brings-out-learning-indicators-for-classes-i-to-viii/

16 ಸಿಂಡರ್ ಸಿ.ಆರ್., ಲೋಪೆಜ್ ಎಸ್.ಜೆ., ಪೆದ್ರೊಟ್ಟಿ ಜೆ.ಟಿ. ಪಾಸಿಟಿವ್ ಸೈಕಾಲಜಿ, ಎರಡನೇ ಆವೃತ್ತಿ, ಸೇಜ್ ಪಬ್ಲಿಕೇಶನ್ಸ್ ಇಂಡಿಯಾ ಪ್ರೈ. ಲಿ, 2011.

17 ವಿಶೇಷಚೇತನ ವ್ಯಕ್ತಿಗಳ ಹಕ್ಕು ಕಾಯಿದೆ, 2016, http://www.ncpedp.org/sites/all/themes/marinelli/documents/Rights%20of%20Persons%20with%20Disabilities%20(RPWD)%20Act%202016.pdf

18 ವಿಶೇಷಚೇತನ ವ್ಯಕ್ತಿಗಳ (ಸಮಾನ ಅವಕಾಶಗಳು, ಹಕ್ಕುಗಳ ರಕ್ಷಣೆ ಮತ್ತು ಸಂಪೂರ್ಣ ಪಾಲ್ಗೊಳ್ಳುವಿಕೆ) ಕಾಯಿದೆ, 1995, http://thenationaltrust.gov.in/upload/uploadfiles/files/Persons%20with%20Disability%20Act%201995.pdf



**ಅನುರಾಧಾ** ಅವರು ಇತ್ತೀಚಿನ ತನಕ, ಚೈನೀಸ್ ಮಾತನಾಡದ ಜನರಿಗಾಗಿ ಹಾಂಕಾಂಗ್ ಸರ್ಕಾರವು ನಡೆಸುವ ಆರಂಭಿಕ ಶಿಕ್ಷಣ ಕೇಂದ್ರವೊಂದರ ಅಡಿಯಲ್ಲಿ 0–6 ವಯೋವರ್ಗದ, ವಿಶೇಷ ಅಗತ್ಯತೆಯ ಮಕ್ಕಳಿಗಾಗಿ 'ಅರ್ಲಿ ಇಂಟರ್‌ವೆನ್ಶನಿಸ್ಟ್' ಆಗಿ ಸೇವೆ ಸಲ್ಲಿಸುತ್ತಿದ್ದರು. ಅವರು ಚೆನ್ನೈನ ವಿದ್ಯಾ ಸಾಗರ್ ಸಂಸ್ಥೆಯಲ್ಲಿ 20 ವರ್ಷಗಳ ಹಿಂದೆ ವಿಶೇಷ ಶಿಕ್ಷಕಿಯಾಗಿ ತರಬೇತಿ ಪಡೆದರು ಅಲ್ಲಿ ಅವರಿಗೆ 'ಟ್ರಾನ್ಸ್-ಡಿಸಿಪ್ಲಿನರಿ' ವಿಧಾನವನ್ನು ಪರಿಚಯಿಸಲಾಗಿತ್ತು. ಅವರು ತಮ್ಮ ವಿದ್ಯಾರ್ಥಿಗಳಿಗೆ ಥೆರಪಿ, ಶಿಕ್ಷಣ ಮತ್ತು ಬದಲಿ ಸಂವಹನವನ್ನು ಮೋಜುಭರಿತ ಕಲಿಕಾ ಪ್ರಕ್ರಿಯೆಯಾಗಿ ಹೆಣೆಯಲು ನಿರಂತರವಾಗಿ ಶ್ರಮಿಸುವ ಕಾರಣ ಅವರ ಈ ಅಭ್ಯಾಸವು ವಿಕಸನಗೊಂಡಿದೆ. ಅವರನ್ನು anuradha.naidu@gmail.com ಇಮೇಲ್ ಐಡಿಯ ಮೂಲಕ ಸಂಪರ್ಕಿಸಬಹುದು.